# ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ,

(ಯೋಗ-ಸಂಸ್ಕೃತಂ ವಿಶ್ವವಿದ್ಯಾಲಯ, ಫ್ಲೋರಿಡಾ, ಅಮೇರಿಕದ ಸಂಶೋಧನಾ ಕೇಂದ್ರ)

58, ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ,

ಬೆಂಗಳೂರು—560018

ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆಯ ಅಡಿಯಲ್ಲಿ ಡಿಶಂಬರ 28,29,30 2014 ರಂದು ನಡೆಯುವ ಹರಿದಾಸ ಸಾಹಿತ್ಯ ಸಮ್ಮೇಳನದಲ್ಲಿ

**ಪ್ರಸ್ತುತ ಪಡಿಸುವ ಪ್ರಬಂಧ**

**ವಿಷಯ :- " ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳಲ್ಲಿ ದಶಾವತಾರ" ಒಂದು ತುಲನಾತ್ಮಕ ಅಧ್ಯಯನ**


ಸಂಶೋಧಕರ ಹೆಸರು :- ಶ್ರೀಮತಿ ರಾಜಾಮಣಿ ಕುಲಕರ್ಣಿ

" ದಾಸ ಸಾಹಿತ್ಯ" ಪಿ.ಹೆಚ್. ಡಿ. ವಿದ್ಯಾರ್ಥಿಯಾಗಿ

ಮಾರ್ಗದರ್ಶಕರ ಹೆಸರು:- ಡಾ॥ ಸುಮನ್ ಯಜುರ್ವೇದಿ

ನಿವೃತ್ತ ಕನ್ನಡ ಪ್ರಧ್ಯಾಪಕರು

ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯ ಗುಲಬರ್ಗಾ

ಉಪ ಮಾರ್ಗದರ್ಶಕರು:- ಡಾ॥ ಸುಭಾಸ ಕಾಖಂಡಕಿ

ಹಿರಿಯ ವಿಜ್ಞಾನಿ ಹಾಗೂ ನಿರ್ದೇಶಕರು ಎನ್. ಐ .ವ್ಹಿ. ಎಸ್. ಹಾಗೂ

ಅಧ್ಯಕ್ಷರು ಶ್ರೀ ಪ್ರಸನ್ನವೆಂಕಟ ಕಲ್ಚರಲ್ ಹಾಗೂ ಚಾರಿಟೇಬಲ್ ಟ್ರಸ್ಟ್ (ರಿ) ಬೆಂಗಳೂರು.

# ಆಧಾರ ಗ್ರಂಥಗಳು


| ಗ್ರಂಥ | ಲೇಖಕರು |
|---|---|
| 1) ಬಾಗಲಕೋಟೆಯ "ಶ್ರೀ ಪ್ರಸನ್ನವೆಂಕಟದಾಸರು" | ಶ್ರೀ ಧ್ರುವಾಚಾರ್ಯ ಕಾಖಂಡಕಿ |
| 2) ಸಮಗ್ರ ದಾಸ ಸಾಹಿತ್ಯ ಸಂ:- ೮ | |
| " ಶ್ರೀಸನ್ನವೆಂಕಟದಾಸರ ಕೀರ್ತನೆಗಳು" | ಪ್ರಕಾಶಕರು: ಕರ್ನಾಟಕ ಸರ್ಕಾರ |
| | ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,ಬೆಂಗಳೂರು. |
| 3) ಸಮಗ್ರ ದಾಸ ಸಾಹಿತ್ಯ ಸಂ:- ೯ , ಭಾಗ-1 | ಪ್ರಕಾಶಕರು:ಕರ್ನಾಟಕ ಸರ್ಕಾರ |
| ಶ್ರೀ ವಿಜಯದಾಸರು | ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರ |
| 4) ಶ್ರೀ ಪ್ರಾಣೇಶದಾಸರು ಒಂದು ಅಧ್ಯಯನ | ಡಾ|| ಸುಮನ್ ಯಜುರ್ವೇದಿ. |
| 5) ದಶಾವತಾರ ಪದಗಳು | ಸಂಪಾದಕರು :-ರಾಜಾ ಎಸ್. ಗೋಪಾಲಾಚಾರ್ಯ<br>ಪ್ರಕಟಣೆ:-ಶ್ರೀ ಸುಶಮೀಂದ್ರ ಸೇವಾ ಪ್ರತಿಷ್ಠಾನ ಮೈಸೂರು. |
| 6) : ಶ್ರೀ ದಶಾವತಾರಸ್ತೋತ್ರಮಂಜರೀ(ಕನ್ನಡ ಭಾವಾರ್ಥಸಹಿತ) | ಸಂಗ್ರಹ-ಅನುವಾದ ಶ್ರೀ ಶ್ರೀನಿವಾಸ. ಸು. ಮಠದ 2001 |
| 7) ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು | ಸಂಗ್ರಾಹಕರು-ಸಂಪಾದಕರು |
| ಸಂಪುಟ-1 | ಡಾ|| ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿ |
| ೮) ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು | ಸಂಗ್ರಾಹಕರು-ಸಂಪಾದಕರು |
| ಸಂಪುಟ-2 | ಡಾ|| ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿ |

**<u>ಸಾರಾಂಶ</u>**: -

ನಾನು ಶ್ರೀಮತಿ ರಾಜಾಮಣಿ ಕುಲಕರ್ಣಿ ಶ್ರೀ ಪ್ರಸನ್ನವೆಂಕಟದಾಸರ ದಶಾವತಾರದ ಕೃತಿಗಳ ತೌಲನಿಕ ಅಧ್ಯಯನ ಈ ವಿಷಯವನ್ನು ಕುರಿತು ಅಧ್ಯಯನಾಕಾಂಕ್ಷಿಯಾಗಿ,' ಸಂಶೋಧಕಿಯಾಗಿ ತಮ್ಮ ಸಂಸ್ಥೆಯಲ್ಲಿ ಪ್ರವೇಶ ಪಡೆದು ಅಧ್ಯಯನವನ್ನು ಮಾಡುತ್ತಿದ್ದೇನೆ. ಖಶೆಂರ 28, 29, 30 2014 ರಂದು ನಡೆಯುವ ಹರಿದಾಸ ಸಮ್ಮೇಳನದಲ್ಲಿ ನಾನು ನನ್ನ ಅಧ್ಯಯನದ ವಿಷಯ ಕುರಿತು ಪ್ರಬಂಧವನ್ನು ಮಂಡಿಸುತ್ತಿರುವೆ. ಈ ವಿಷಯ ಕುರಿತು ಪ್ರಬಂಧವನ್ನು ಮಂಡಿಸಲು ನನಗೆ ಹರ್ಷವೆನಿಸುತ್ತದೆ.

ಈ ಸಂಶೋಧನಾ ಕಾರ್ಯಕ್ಕೆ ನನಗೆ ಮಾರ್ಗದರ್ಶಕರು ಶ್ರೀಮತಿ ಡಾ: ಸುಮನ ಯಜುರ್ವೇದಿ ನಿವೃತ್ತ ಉಪನ್ಯಾಸಕರು ಗುಲ್ಬುರ್ಗ

ಹಾಗೂ ಸಹ ಮಾರ್ಗದರ್ಶಕರಾಗಿ ಡಾ: ಸುಭಾಸ ಕಾಖಂಡಕಿ ಶ್ರೀ ಪ್ರಸನ್ನವೆಂಕಟ ಕಲ್ಚರಲ್ ಟ್ರಸ್ಟ ಸಂಸ್ಥಾಪಕರು

ಇವರೀರ್ವರ ಮಾರ್ಗದರ್ಶನದಲ್ಲಿ ನಾನು ಅಧ್ಯಯನ ಮಾಡುತ್ತರುವುದು ನನ್ನ ಸೌಭಾಗ್ಯವಾಗಿದೆ.

ಈ ಪ್ರಬಂಧದ ಸಾರಾಂಶವೆಂದರೆ ಹರಿದಾಸ ಪರಂಪರೆಯು ಹೇಗೆ ಉದಿಸಿತು ಮತ್ತು ಹರಿದಾಸ ಪರಂಪರೆಯಲ್ಲಿ ಸಾಗಿ ಬಂದ ದಾಸಶ್ರೇಷ್ಠರು ಮತ್ತು ಅವರ ಕಾಲ ಉಲ್ಲೇಖಿಸಲಾಗಿದೆ. ಶ್ರೀ ಪ್ರಸನ್ನವೆಂಕಟದಾಸರ ಜೀವನವನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದೇನೆ. ಅಕ್ಷರಾಭ್ಯಸವಿಲ್ಲದೇಯೆ ನೊಂದು ಬೆಂದು ವ್ಯಥೆಪಡುತ್ತದ್ದ ಜೀವನ ವೆಂಕಪ್ಪಯ್ಯನಾದಾಗಿತ್ತು.

ಅತ್ತಿಗೆಯ ಕಠೋರ ನುಡಿಯು ವೆಂಕಪ್ಪನಿಗೆ ಹರಿದಾಸನಾಗುವ ಭಾಗ್ಯವನ್ನು ಕಲ್ಪಸಿಕೊಟ್ಟಿತು. ಅವರು ಮುಂದೆ ಅತ್ತಿಗೆಗೆ ಅಭನಂದನೆಗಳನ್ನು ಸಲ್ಲಿಸುತ್ತಾರೆ. ಶ್ರೇಷ್ಠ ದಾಸ್ಯತ್ವವನ್ನು ಹೊಂದಲು ಅತ್ತಿಗೆಯೇ ಪ್ರೇರಣೆ ಎಂದು ಸಂತಸಪಡುತ್ತಾರೆ. ತಿರುಪತಿಯಲ್ಲಿ ಅವರಿಗೆ ಶ್ರೀನಿವಾಸನ ಅನುಗ್ರಹವಾಗಿ

“ಪ್ರಸನ್ನ ವೆಂಕಟ” ಎಂಬ ಅಂಕಿತ ದೊರೆಯುತ್ತದೆ. ಮುಂದೆ ಪ್ರಸನ್ನವೆಂಕಟದಾಸರಾಗಿ ಈ ಕೆಳಗಿನ ಪ್ರಸಿದ್ಧ ಕೃತಿಗಳನ್ನು ರಚಿಸುತ್ತಾರೆ.

1) ಸತ್ಯಭಾಮಾ ವಿಲಾಸ

2) ಸಮಸ್ತನಾಮ ಮಣಿಗಣ ಷಟ್ಚರಣ ಪದ್ಯಮಾಲಾ

3) ಭೇದಮುಕ್ತಾವಳಿ

4) ನಾರದ ಕೊರವಂಜಿ

5) ಪ್ರಸನ್ನ ವೆಂಕಟ ಭಾಗವತ ದಶಮಸ್ಕಂದ ಪೂರ್ವಾರ್ಧ

6) ನಾರಾಯಣ ಪಂಜರ

ಶ್ರೀ ಪ್ರಸನ್ನವೆಂಕಟದಾಸರಾಗಿ ಅವರು ಹಲವಾರು ಪ್ರಸದ್ಧ ಕ್ಲಿಷ್ಟಕರ ಕೃತಿಗಳನ್ನು ಕನ್ನಡ ಮತ್ತು ಸಂಸ್ಕ್ರತ ಭಾಷೆಯಲ್ಲಿ ರಚಿಸಿದ್ದಾರೆ. ಶ್ರೀ ಪ್ರಸನ್ನವೆಂಕಟದಾಸರ ದಶಾವತಾರದ ಕೃತಿಗಳ ತೌಲನಿಕ ಅಧ್ಯಯನ ನಾನು ಆಯ್ದುಕೊಂಡ ವಿಷಯವಾಗಿದೆ.

ದಾಸ ಸಾಹಿತ್ಯದ ಮೇರು ರಚನೆಗಳಲ್ಲಿ ದಶಾವತಾರಗಳ ವರ್ಣನೆ ಹರಿದಾಸರುಗಳ ಅದ್ಭುತ ಸೃಷ್ಠಿ ಎನಿಸಿದೆ.ದಶಾವತಾರಗಳು ಮೂಲವಾಗಿ ದಶಾವತಾರದ ಸ್ತುತಿ ಸ್ತೋತ್ರಗಳು ಶ್ರೀಮದ್ಭಾಗವತದಿಂದ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ. ಶ್ರೀಮದ್ಭಾಗವತದ ಎರಡನೆಯ ಸ್ಕಂಧ ಏಳನೆಯ ಅಧ್ಯಾಯದಲ್ಲಿ ದಶಾವತಾರ ಸ್ತೋತ್ರಗಳು, ದಶಮಸ್ಕಂಧದ ೩೮ನೆಯ ಅಧ್ಯಾಯದಲ್ಲಿ ಅಕ್ರೂರಕೃತ ದಶಾವತಾರ ಸ್ತುತಿ,4ನೆಯ ಅಧ್ಯಾಯದ ಆರನೆಯ ಸ್ಕಂಧದಲ್ಲಿ ದಶಾವತಾರ ಮೂರ್ತಿಗಳ ಪ್ರಾರ್ಥನೆ ಗಳು ಉಲ್ಲೇಖಿತವಾಗಿವೆ. ನಂತರದಲ್ಲಿ ಆದಿತ್ಯ ಪುರಾಣದ ಶ್ರೀವೆಂಕಟೇಶ ಮಹಾತ್ಮ್ಯೆಯಲ್ಲಿ ದಶಾವತಾರದ ಸ್ತುತಿಸಿರುವುದು ಕಂಡುಬರುತ್ತದೆ.ದಶಾವತಾರದ ಒಂದೊಂದೇಅವಾರವನ್ನು ವರ್ಣಿಸುತ್ತಾ ಶ್ರೀನಿವಾಸನ ಸ್ಮರಣೆ ಮಾಡಿರುವ ಸ್ತೋತ್ರಗಳು ಕಂಡುಬರುತ್ತವೆ.

ಹರಿದಾಸ ಪರಂಪರೆಯಲ್ಲಿರುವ ಬಹುತೇಕ ಎಲ್ಲ ದಾಸರೂ ದಶಾವತಾರದ ವರ್ಣನೆಯನ್ನು ಮಾಡಿರುತ್ತಾರೆ. ಕೋಲಾಟ ಪದ್ಯ, ಜೋಗುಳಪದ್ಯ, ಮಂಗಳಾರುತಿ ಪದ್ಯ ಮತ್ತು ಹತ್ತು ಅವತಾರಗಳನ್ನು ವರ್ಣಿನಿಸುವ ಹತ್ತು ನುಡಿ ಪದ್ಯ, ಒಂದೇ ನುಡಿಯಲ್ಲಿ ಹತ್ತು ಅವತಾರಗಳು ಹೀಗೆ

ವಿವಿಧ ಬಗೆಯಲ್ಲಿ ತಮ್ಮದೇ ಆದ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಶ್ರೀರಾಮಾವತಾರ ಹಾಗೂ ಶ್ರೀಕೃಷ್ಣಾವತಾರದ ವರ್ಣನೆ ಇರುವ ಕೀರ್ತನೆಗಳೂ ಸಾಕಷ್ಟು ಇವೆ.

ಶ್ರೀ ಪ್ರಸನ್ನವೆಂಕಟದಾಸರು ದಶಾವತಾರ ವರ್ಣಿಸುವ ಹಲವಾರು ಕೃತಿಗಳನ್ನು ರಚನೆ ಮಾಡಿದ್ದಾರೆ. ನಾನು ಇಲ್ಲಿಯವರೆಗೆ ದಾಸರ 68 ಕೃತಿಗಳ ಅಧ್ಯಯನವನ್ನು ಸಮಗ್ರ ದಾಸ ಸಾಹಿತ್ಯ ಸಂಪುಟ -8 ಪ್ರಕಟಗೊಂಡ ಕೃತಿಗಳಲ್ಲಿ 60 ಪದ್ಯಗಳು ಮತ್ತು 8 ಸುಳಾದಿಗಳುಅಧ್ಯಯನ ಮಾಡಿದ್ದೇನೆ. ಇವುಗಳಲ್ಲಿ ಪದ್ಯಗಳಲ್ಲಿಯ ವೈಶಿಷ್ಠತೆ ಎಂದರೆ, ಪ್ರತಿಯೊಂದು ಕೃತಿಗೂ ತನ್ನದೇ ವೈಶಿಷ್ಠತೆ ಇರುವುದು ಕಂಡುಬರುತ್ತದೆ.ಒಂದು ಕೃತಿಯೂ ಮತ್ತೊಂದು ಕೃತಿಯಿಂದಲೂ ಭಿನ್ನವಾಗಿದೆ. ಒಂದು ಕೃತಿಯಲ್ಲಿ ಒಂದು ನುಡಿಯಲ್ಲಿ ದಶಾವತಾರವನ್ನು ವರ್ಣಿಸಿದರೆ, ಮತ್ತೊಂದು ಕೃತಿಯು ಒಂದೇ ಶಬ್ದದಲ್ಲಿ ಒಂದೊಂದು ಅವತಾರವನ್ನು ವರ್ಣಿಸುತ್ತದೆ. ಇನ್ನೊಂದು ಕೃತಿಯಲ್ಲಿ ಗೂಢಅರ್ಥದಲ್ಲಿ (Hidden meaning) ಎರಡು ಅವತಾರಗಳನ್ನು ಸೃಷ್ಟಿಸಿರುವುದನ್ನು ಕಾಣುತ್ತೇವೆ. ದಾಸರ ಪ್ರತಿಯೊಂದು ಕೃತಿಗಳು ಭಿನ್ನ ವಿಭಿನ್ನವಾಗಿವೆ. ಇನ್ನು ಇತ್ತೀಚೆಗೆ ಅಂದರೆ 2014 ಸೆಪ್ಟೆಂರನಲ್ಲಿ ಬಿಡುಗಡೆಯಾದ "ಶ್ರೀ ಪ್ರಸನ್ನವೆಂಕಟದಾಸರ ಕೀರ್ತನೆಗಳು" ಸಂಪುಟ-2 ಡಾ॥ ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿಯವರು ಸಂಪಾದಿಸಿ ಸಂಗ್ರಹಿಸಿ ಪ್ರಕಟಿಸಿದ ಪುಸ್ತಕದಲ್ಲಿ, ದಾಸರ ಅದ್ಭುತ ಕೀರ್ತನೆಗಳ ಸಂಗ್ರಹವಾಗಿದೆ.ವಿಶೇಷ ಕೃತಿಗಳು ದೊರಕುತ್ತವೆ. 29 ದಶಾವತಾರವನ್ನೊಳಗೊಂಡ ಕೀರ್ತನೆಗಳಲ್ಲಿ 11 ಕೀರ್ತನೆಗಳು ಸಂಪೂರ್ಣ ದಶಾವತಾರವನ್ನು ವರ್ಣಿಸುವ ಕೃತಿಗಳಾಗಿರುತ್ತವೆ. ಉಳಿದ ಕೃತಿಗಳಲ್ಲಿ ಮಧ್ಯದಲ್ಲಿ 3,4, 2, 6, 9 ಅವತಾರಗಳನ್ನು ವರ್ಣಿಸಿರುವು ಕಂಡುಬರುತ್ತದೆ.ಅದರಲ್ಲಿ 16 ಕೃತಿಗಳು ಶ್ರೀಕೃಷ್ಣನ ಬಾಲಲೀಲೆಯನ್ನು ವರ್ಣಿಸಿದರೆ, 53 ಕೃತಿಗಳು ಶ್ರೀಕೃಷ್ಣನ ಸಂಪೂರ್ಣ ಲೀಲಾ ವಿನೋದಗಳನ್ನು ವರ್ಣಿಸುವ ಕೃತಿಗಳಾಗಿವೆ. 5 ಕೃತಿಗಳು ಸಂಪೂರ್ಣ ರಾಮಾವತಾರವನ್ನು ವರ್ಣಿಸುವ ಕೃತಿಗಳಾಗಿರುತ್ತವೆ.ಇನ್ನು ಒಂದು ವಿಶೇಷ ಕೃತಿ ಎಂದರೆ ಶ್ರೀ ನರಸಿಂಹಾವತಾರ ಅವಿರ್ಭವಿಸಿದ ಕೃತಿ." ಜಯತು ಜಯತು ಜಯತು ಲಕ್ಷ್ಮೀವರ ಮನೋಹರ ಜಯತು" ಈಕೃತಿಯಲ್ಲಿ ಶ್ರೀ ನರಸಿಂಹ ಯಾವ ರೀತಿಯಲ್ಲಿ ಆರ್ಭಟಿಸಿ ಕಂಭದಿಂದ ಬಂದನು ಎಂಬ ಪ್ರತ್ಯಕ್ಷ ರೂಪ ಕಣ್ಮುಂದೆ ಬಂದಂತೆ ಅನಿಸುತ್ತದೆ. "ಶ್ರೀ ಪ್ರಸನ್ನವೆಂಕಟದಾಸರ ಕೀರ್ತನೆಗಳು" ಸಂಪುಟ-1 ರಲ್ಲಿಯೂ ಸಾಕಷ್ಟು

ದಶಾವತಾರದ ಕೀರ್ತನೆಗಳು  ಪ್ರಕಟಗೊಂಡಿವೆ. ಸಂಪುಟ-2 ರಲ್ಲಿ ಅತ್ಯಂತ ವಿಶೇಷ ಕೃತಿಗಳು ನಮಗೆ ಲಭ್ಯವಾವೆ.

ದಾಸರ ಪ್ರತಿಯೊಂದು ಕೃತಿಗಳು ನಮ್ಮನ್ನು ಚಿಂತನೆಯಲ್ಲಿ ತೊಡಗುವಂತೆ ಮಾಡುತ್ತವೆ. ಪ್ರತಿ ಪದ್ಯದ ಕೊನೆ ಸಾಲಿನಲ್ಲಿ ದಾಸರ ದೈನ್ಯತಾ ಭಾವ ಎದ್ದು ಕಾಣುತ್ತದೆ. ತಮ್ಮನ್ನು ತಾವು ಸಮರ್ಪಿಸಿಕೊಂಡಿರುದು ಕಂಡುಬರುತ್ತದೆ. ದಾಸರ ಪ್ರತಿ ಪದ್ಯದಲ್ಲಿಯೂ ದಾಸರು ಶ್ರೀ ಹರಿಯನ್ನು ಎಷ್ಟು ಕೊಂಡಾಡಿದರೂ ತೃಪ್ತಿಯೇ ಸಿಕ್ಕಿಲ್ಲ ಎಂಬ ತುಡಿತ ಅವರ ಪ್ರತಿ ಪದ್ಯದಲ್ಲಿ ವ್ಯಕ್ತವಾಗಿರುವುದು ಕಂಡು ಬರುತ್ತದೆ. ನಾನು ಎಚಿದೆಂದಿಗೂ ನಿನ್ನ ಸೇವಕನು ಎಂಬ ಭಾವವಿರುವುದನ್ನು ಅವರ ಕೃತಿಗಳಲ್ಲಿ ಕಂಡುಬರುವ ಮತ್ತೊಂದು ವೈಶಿಷ ತೆಯಾಗಿದೆ.

ಶ್ರೀ ಪ್ರಸನ್ನವೆಂಕಟದಾಸರು ಹಾಗೂ ಶ್ರೀ ವಿಜಯದಾಸರು  ಕೃತಿಗಳಲ್ಲಿ ಸಮಕಾಲೀನ ಸಾಮ್ಯತೆ,ಆಡುಭಾಷೆಯಲ್ಲಿಯ ರಚನೆ,ಆತ್ಮ ನಿವೇದನಾ ವೈಶಿಷ್ಟತೆಗಳನ್ನು ಕಾಣುತ್ತೇವೆ. ಶ್ರೀಪ್ರಸನ್ನವೆಂಕಟದಾಸರು  ಒಂದೇ ಸಾಲಿನಲ್ಲಿ ಒಂದೊಂದು ಶಬ್ದದಲ್ಲಿ ಒಂದೊಂದು ಅವತಾರಗಳನ್ನು ಸೃಷ್ಟಿಸಿರುತ್ತಾರೆ..ವಿಶೇಷವಾಗಿ ಶ್ರೀಕೃಷ್ಣಾವತಾರದ ಇವರಕೀರ್ತನೆಗಳು ಅದ್ಭುತವಾಗಿವೆ. ಬಾಲಭಾಷೆ, ಬಾಲಲೀಲೆ ಕೊಳಲೂದುವ ಪರಿ , ಬಾ ಎಂದು ಕರೆಯುವ ಪದ್ಯ, ಯಶೋದೆ-ಕೃಷ್ಣರ ಸಂವಾದ, ಶ್ರೀಕೃಷ್ಣನನ್ನು 'ಬಾರಮ್ಮ' ಎಂದು ಸ್ತ್ರೀರೂಪದಿಂದ ಸಂಬೋಧಿಸುವ ರೀತಿ  ಹೀಗೆ ಹತ್ತು ಹಲವಾರು ರೂಪಗಳಿಂದ ಹಾಡಿ ಹೊಗಳಿದ್ದಾರೆ.ಇವರು ರಚಿಸಿದ ಶ್ರೀರಾಮಾವತಾರ ಹರಿಯ ಪದ್ಯಗಳು ವೈಶಿಷ್ಟ್ಯತೆಯನ್ನು ಮೆರೆದಿವೆ.

ಶ್ರೀಪಾದರಾಯರ ಯುಗದ ನಂತರದಲ್ಲಿ ಬಂದಂತಹ  ಪುರಂದರದಾಸರಿಂದ ಶ್ರೀ ವಿಜಯದಾಸರವರೆಗಿನ ಸಾಹಿತ್ಯವನ್ನು ಅವಲೋಕಿಸಿದಾಗ,ಶ್ರೀಪ್ರಸನ್ನವೆಂಕಟದಾಸರು ಶ್ರೀವಾದಿರಾಜರ ಕೃತಿರಚನಾ ಶೈಲಿಯನ್ನು  ಮುಂದುವರಿಸಿಕೊಂಡು ಬಂದಿರುವುದು ಕಂಡುಬರುತ್ತದೆ.  ಅಪರೋಕ್ಷ ಜ್ಞಾನಿಗಳ ಆಶೀರ್ವಾದದಿಂದಲೇ ಶ್ರೀಪ್ರಸನ್ನವೆಂಕಟದಾಸರು ಅಪರೋಕ್ಷ ಜ್ಞಾನಿಗಳೆನಿಸಿ ನಮಗೆಲ್ಲ ಹರಿದಾಸ ಸಾಹಿತ್ಯವೆಂಬ ಅಮೃತದ ಜೊತೆಗೆ ಅನೇಕ ನಮ್ಮ ಇಷಾ ರ್ಥಗಳನ್ನು ಸಲ್ಲಿಸಲು ಅಭಯ ಹಸ್ತರಾಗಿ ನಮ್ಮ ಬಾಗಲಕೋಟೆಯಲ್ಲಿ ನೆಲೆಸಿದ್ದಾರೆ. ನನ್ನ ಇಷ್ಟಾರ್ಥ ಈಡೇರಿಸುತ್ತಿದ್ದಾರೆ. ಅವರ

ಆಶೀವಾದದಿಂದಲೇ ನನ್ನ ಜ್ಞಾನಕ್ಕೆ ನಿಲುಕಿದ ಕೆಲವು ಕೃತಿಗಳ ಯಥಾಮತಿ ಅಧ್ಯಯನ ಮಾಡಿ ಸೇವೆಯನ್ನು ಸಮರ್ಪಿಸಿದ್ದೇನೆ. ಸೇವೆ ಕೊಡುವವರೂ ಅವರೇ,ಸೇವೆಯನ್ನು ಮಾಡಿಸಿಕೊಳ್ಳುವವರೂ ಅವರೇ, ನಾನು ಸೇವಾಕಾಂಕ್ಷಿಯಾಗಿಯೇ ದಾಸರ ಕೀರ್ತನೆಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಬಯಕೆಯಿಂದ ಈ ಸಂಶೋಧನಾ ಕಾರ್ಯಕ್ಕೆ ಮುಂದಾಗಿದ್ದೇನೆ.

**********

ಪೀಠಿಕೆ:-

"ಶ್ರವಣಂ ಕೀರ್ತನಂ ವಿಷ್ಣೋ:ಸ್ಮರಣಂ ಪಾದಸೇವನಂ ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ". ಭಕ್ತಿಯ ನವವಿಧ ಸ್ವರೂಪವನ್ನು ಬಣ್ಣಿಸಿದ್ದಾರೆ. ಭಕ್ತಿ-ಭಕ್ತ ಮತ್ತು ಭಗವಂತನ ಸಂಬಂಧವನ್ನು ಈ ನವವಿಧ ಭಕ್ತಿಗಳಲ್ಲಿ ಕಾಣಬಹುದು. ಭಕ್ತ ಭಗವಂತನ ದಾಸ. ಭಗವಂತ ಭಕ್ತರ ಭಕ್ತಿಗೆ ದಾಸನಾಗಿ ಒಲಿಯುತ್ತಾನೆ.ಅಷ್ಟೇ ಅಲ್ಲ ಭಕ್ತರ ದಾಸ್ಯತ್ವಕ್ಕೆ ದಾಸಾನುದಾಸನಾಗುತ್ತಾನೆ ಎಂಬುದನ್ನು ಅನೇಕ ಪೌರಾಣಿಕ ಕಥೆಗಳಲ್ಲಿ ಕಾಣುತ್ತೇವೆ.

ಹರಿದಾಸ ಸಾಹಿತ್ಯ ಮೂಲಭೂತವಾಗಿ ಭಕ್ತಿಯ ತತ್ವವನ್ನೇ ಆಧರಿಸಿದ್ದಾಗಿದೆ.ದಾಸ ಪರಂಪರೆಯನ್ನು ಅವಲೋಕಿಸಿದಾಗ ಭಗವಂತ ದಾಸರ ಭಕ್ತಿಯ ಪರಾಕಾಷ್ಠತೆಯಿಂದಲೇ ಅವರ ಹೃದಯಗಳಲ್ಲಿ ನೆಲೆನಿಂತಿದ್ದಾನೆ ಎಂಬುದನ್ನು ಅನೇಕ ಪೌರಾಣಿಕ ಹಿನ್ನೆಲೆಗಳಲ್ಲಿ ಕಾಣಬಹುದಾಗಿದೆ.

ದಾಸಕೂಟ ಪರಂಪರೆಯನ್ನು ಮೇರುಪರ್ವತದಂತೆ ಕೊಂಡೊಯ್ದರು ದಾಸವರೇಣ್ಯರು. ಭಕ್ತಿಮಾರ್ಗದ ಅನುಸರಣೆಯೊಂದೆ ದಾಸ ಮತ್ತು ವ್ಯಾಸ ಸಾಹಿತ್ಯದ ಗುರಿಯಾಗಿದ್ದಿತು. ಫಲಾಪೇಕ್ಷೆಯಿಲ್ಲದೇ ಲೋಕಕಲ್ಯಾಣಕ್ಕಾಗಿ ಭಗವಂತನಿಗೆ ಪ್ರಿತ್ಯರ್ಥವಾಗಿ ಕಾಯಕದ ಆಚರಣೆಮಾಡುತ್ತಾ ಪೊಜೆ, ಸೇವೆ, ಕೀರ್ತನೆ, ಶಾಸ್ತ್ರಗ್ರಂಥ ರಚನೆ ಹರಿದಾಸರ ಮತ್ತು ಯತಿಗಳ ಮುಖ್ಯ ಗುರಿಯಾಗಿತ್ತು.

ಹರಿದಾಸರ ನಿಷ್ಕಲ್ಮಷ ಭಕ್ತಿಗೆ ಒಲಿದ ಭಗವಂತ ಅವರಿಂದ ಹರಿದಾಸಾಮೃತವನ್ನು ನಮ್ಮಂಥ ಪಾಮರರಿಗೆ ಉಣಬಡಿಸಿದ್ದಾನೆ.ಹರಿದಾಸರಿಂದ ಹೊರಬಂದ ಅದ್ಭುತ ರಚನೆಗಳನ್ನು ಓದಿ ಅಧ್ಯೆಯನಮಾಡಿ, ನಮ್ಮಭಕ್ತಿಯ ಸೇವೆಯನ್ನು ಭಗವಂತನಿಗೆ ಸಮರ್ಪಿಸಬೇಕಾದ ಅಗತ್ಯತೆ ಇಂದು ಇದೆ.

"ನಮ:ಶ್ರೀಪಾದರಾಜಾಯನಮಸ್ತೇವ್ಯಾಸಯೋಗಿನ:" ಎಂದು ಸ್ಮರಿಕೊಳ್ಳುತ್ತ ಹರಿದಾಸ ಸಾಹಿತ್ಯವೆನ್ನುವ ವೃಕ್ಷವು ಶ್ರೀಮಧ್ವಾಚಾರ್ಯರಿಂದ ಬಿತ್ತನೆಯಾಗಿ ನರಹರಿತೀರ್ಥರಲ್ಲಿ ಚಿಗುರಾಗಿ ಶ್ರೀಪದಾರಾಜರು ಮತ್ತು ವ್ಯಾಸರಾಯರಿಂದ ಅರಳಿಸಿಕೊಂಡು ಹೂವಾಗಿದೆ.ಹಣ್ಣಾಗಿದೆ.ಬೀಜವಾಗಿದೆ.ಬೀಜವಾಗಿ ಇಂದಿನವರೇಗೂ ಎಲ್ಲೆಂದರಲ್ಲಿ ವಿಭಿನ್ನ ರೂಪದಿಂದ

ಬಿತ್ತುತ್ತ ಹೋಗುತ್ತಿದೆ.ಕಂಪ್ಯೂಟರ ಯುಗದಲ್ಲಿ ಹೊಸ ಹೊಸ ರೂಪವನ್ನು ಪಡೆಯುತ್ತಿದೆ.ವ್ಯಾಸರಾಯರ ದಿವ್ಯ ಶಿಷ್ಯದ್ವಯರು ಶ್ರೀ ಪುರಂದರದಾಸರು ಮತ್ತು ಕನಕದಾಸರು ಹರಿದಾಸಸಾಹಿತ್ಯವನ್ನು ಮುಕುಟಪ್ರಾಯವಾಗಿಸಿದವರೆಂದರೆ ತಪ್ಪಾಗಲಾರದು.ಶ್ರೀವಾದಿರಾಜತೀರ್ಥರು, ಶ್ರೀ ರಾಘವೇಂದ್ರತೀರ್ಥರಂಥಹ ಯತಿವರೇಣ್ಯರಿಂದ ಆಶೀರ್ವಾದಿತಗೊಂಡಂತಹ ಹರಿದಾಸಸಾಹಿತ್ಯ ಮುಂದೆ ಅನೇಕ ಹರಿದಾಸರಿಂದ ಪಲ್ಲವಿಸಿಕೊಂಡಿತು.ವೈಕುಂಠದಾಸರು,ಮಹಿಪತಿದಾಸರು

,ಪ್ರಸನ್ನವೆಂಕಟದಾಸರು,ವಿಜಯದಾಸರು,ಗೋಪಾಲದಾಸರು,ಜಗನ್ನಾಥದಾಸರು,ಮೋಹನದಾಸರು,ಮೊದರಕಲ್‌ಶೇಷದಾಸರು, ಹೆಳವನಕಟ್ಟೆ ಗಿರಿಯಮ್ಮ ಮುಂತಾದವರಿಂದ ಪ್ರಫುಲ್ಲವಾದ ದಾಸಸಾಹಿತ್ಯದಲ್ಲಿಶಿಷ್ಯ ಪ್ರಶಿಷ್ಯ ಪರಂಪರೆಯಲ್ಲಿ ಪ್ರಾಣೇಶದಾಸರು,ಗುರುಪ್ರಾಣೇಶದಾಸರು, ಶ್ರೀದವಿಠಲರು,ಶ್ರೀಷವಿಠಲರು, ಗುರುಜಗನ್ನಾಥದಾಸರು,ವರದೇಶವಿಠಲರು, ಶಾಮಸುಂದರದಾಸರು ಮೊದಲಾದವರಿಂದ ಹೆಚ್ಚು ಹೆಚ್ಚು ಬೆಳೆಯುತ್ತ ವಿಕಾಸಗೊಳ್ಳುತ್ತಾ ನಿರಂತರ ಹರಿದಾಸ ಕೊಡುಗೆ ನಡೆದು ಬಂದಿದೆ.

ಕ್ರಿ.ಶ.1566 ರಿಂದ 1809 ರವರೆಗಿನ ಅವಧಿಯಲ್ಲಿ ಮಹಿಪತಿದಾಸರು ,ಪ್ರಸನ್ನವೆಂಕಟದಾಸರು ವಿಜಯದಾಸರು,ಗೋಪಾಲದಾಸರು,ಜಗನ್ನಾಥದಾಸರು ಮೊದಲಾದವರು ದಾಸಸಾಹಿತ್ಯವನ್ನು ಶ್ರೀಮಂತಗೊಳಿಸಿದ ಯುಗವೆಂದು ಹೇಳಬಹುದು. ಪ್ರಸನ್ನವೆಂಕಟದಾಸರು ಮತ್ತು ವಿಜಯದಾಸರು ಸಮಕಾಲಿನವರೇ ಆಗಿದ್ದು ಪರಸ್ಪರ ಸಂಪರ್ಕವಿಲ್ಲದೇ ಪ್ರತ್ಯೇಕವಾಗಿ ಹರಿದಾಸ ಸಾಹಿತ್ಯವನ್ನು ರಚಿಸಿದ್ದಾರೆ. ಎಂಬ ವಿಷಯ ಶ್ರೀಮತಿ ಡಾ॥ಸುಮನ್ ಯಜುರ್ವೇದಿಯವರ "ಶ್ರೀ ಪ್ರಾಣೇಶದಾಸರು " ಒಂದು ಅಧ್ಯಯನ ಗ್ರಂಥದಲ್ಲಿ ಪುಟ.ಸಂ.35 ರಲ್ಲಿ ಉಲ್ಲೇಖಿತವಾಗಿದೆ. ಇವರು ಸಂಶೋಧಿಸಿ,ಉಲ್ಲೇಖಿಸಿದ ವರ್ಷ 2005ರಲ್ಲಿ. ಆದರೆ ಇತ್ತೀಚೆಗೆ ಅಂದರೆ 2014 ಸೆಪ್ಟೆಂಬರ 4,5,6 ರಂದು ಲೋಕಾರ್ಪಣೆಯಾಗಿರುವ ಡಾ॥ ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿ ಸಂಪಾದಕರಾಗಿ ಸಂಗ್ರಹಿಸಿರುವ "ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು" ಸಂಪುಟ –2 ರಲ್ಲಿ ಶ್ರೀ ಪ್ರಸನ್ನವೆಂಕಟದಾಸರು ಮತ್ತು ಶ್ರೀವಿಜಯದಾಸರು ಭೇಟಿಯಾದ ಬಗ್ಗೆ ಒಂದು ಕೀರ್ತನೆಯನ್ನು ಪ್ರಕಟಿಸಿರುತ್ತಾರೆ. ಶ್ರೀ ವಿಜಯದಾಸರು ಶ್ರೀ ಪ್ರಸನ್ನವೇಂಕಟದಾಸರನ್ನು ಕೊಂಡಾಡಿ ರಚಿಸಿದ ಕೃತಿ ಅದು. "ಅಚ್ಯುತನ ಮೆಚ್ಚಿಸಿ ಪ್ರಚ್ಚಿನ್ನ ವರ ಪಡೆದ ಆಚಾರ್ಯ ಸಿರಿ ಪ್ರಸನ್ವೆಂಕಟಾರ್ಯರ ಕಂಡೆ" ಇದರಿಂದ ಈರ್ವ ದಾಸವರೇಣ್ಯರು ನಿಸ್ಸಂಶಯವಾಗಿ ಭೇಟಿಯಾಗಿದ್ದರೆಂಬುದು ತಿಳಿದುಬರುತ್ತದೆ .ಅಷ್ಟೇ ಅಲ್ಲ "ಶ್ರೀ ಹರಿಯು ಸ್ವೀಕರಿಸಿ ಈ ಮಹಾ ಭಕುತನಿಗೆ ಕಕುಲಾತಿ ತೋರಿದನು" ಎಂಬ ಈಪದ್ಯದ ಸಾಲಿನಿಂದ ದಾಸರು ನೇರವಾಗಿ ಶ್ರೀನಿವಾಸನಿಂದಲೇ ಅಂಕಿತ ಪಡೆದಿರುತ್ತಾರೆ. ಎಂಬುದು ಸ್ಪಷ್ಟವಾಗುತ್ತದೆ.ಈ ಪದ್ಯದ ಕೊನೆಯ ಸಾಲಿನಲ್ಲಿ ದಾಸರ ಮಹಿಮೆಯನ್ನು ಹೀಗೆ ಕೊಂಡಾಡುತ್ತಾರೆ. "ಏಸೇಸು ಜನುಮಗಳ ಬಯಸಿ ಬರಬೇಕಿ। ಅಸಮಾನ ಜ್ಞಾನ ನಿಧಿ ದಾಸರಾಸರೆಗಾಗಿ॥ ದೋಷರಾಶಗಳಳಿದು ಶ್ರೀಶನ್ನ ತೋರಿಸುವ ।ವಸುಧೀಶ ಶ್ರೀ ವಿಜಯ ವಿಠ್ಠಲ ದಾಸಮಣಿಯು." ಮತ್ತು ಇವರೀರ್ವರ ರಚನೆಯಲ್ಲಿ ಸಾಮ್ಯತೆ ಇರುವುದು ಕಂಡುಬರುತ್ತದೆ.

ಆ.ಗ್ರ." ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು " ಸಂ-2 ಪು.ಸಂ.33 ಸಂಪಾದಕ&ಸಂಗ್ರಾಹಕರು ಡಾ॥ ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿ

"ನಮ:ಶ್ರೀಪಾದರಾಜಾಯನಮಸ್ತೇವ್ಯಾಸಯೋಗಿನ: ನಮ: ಪುರಂದರಾರ್ಯಯ ವಿಜಯಾರ್ಯಾಯತೇ ನಮ:"

ಸಿರಿವಿರಿಂಚಿ ಭವೇಂದ್ರಾದಿ ಸುರರಿಂದ ಅರ್ಚಿತನಾದ
ಸಿರಿಪ್ರಸನವೆಕಂಟನ್ನ ನಿರುತದಿ ಸ್ಮರಿಪ
ಕಾಖಂಡಕಿ ವೆಂಕಪ್ಪನವರ ಚರಣವನೆ ನೆನವನೇ ಧನ್ಯ ಮಾನ್ಯ

ರಮಾಪತಿವಿಠಲಾಂಕಿತರಿಂದ ರಚನೆಗೊಂಡ ಈ ದಾಸವಾಣಿಯು ವೆಂಕಪ್ಪಯ್ಯ ಹೇಗೆ ಪ್ರಸನ್ನವೆಂಕಟದಾಸರಾದರು ಹಾಗೂ ಶ್ರೀನಿವಾಸನಿಂದ ಅನುಗ್ರಹಿತರಾದರು ಎಂಬುದನ್ನು ಮತ್ತು ದಾಸರಿಂದ ಅನುಗ್ರಹಿತರು ಯಾವ ಸುಖವನ್ನು ಪಡೆಯುತ್ತಾರೆ ಎಂಬುದನ್ನು ತಿಳಿಸಿದ್ದಾರೆ.ಕಾಖಂಡಕಿಯ ನರಸಪ್ಪಯ್ಯ ಮತ್ತು ಲಕ್ಷ್ಮೀಬಾಯಿ ದಂಪತಿಗಳ ಕಿರಿಯ ಪುತ್ರರೇ ವೆಂಕಪ್ಪಯ್ಯ. ಅತ್ತಿಗೆ ಆಡಿದಂತಹ ಕಠೋರನುಡಿಯು ಅವರ ಜೀವನದ ದಿಕ್ಕನ್ನೇ ಬದಲಿಸುತ್ತದೆ ಎಂಬುದು ಬಹುಶ: ಆಗ ಅವರಿಗೂ ಗೊತ್ತಿರಲಿಲ್ಲ. ತಿರುಪತಿಯಲ್ಲಿ ದೈನ್ಯತೆಯ ಭಕ್ತನಾಗಿ ಕುಳಿತಿದ್ದರು ವೆಂಕಪ್ಪಯ್ಯನವರು. ತಾನು ಏಕಾಂಗಿಯಾಗಿ ಭಗವಂತನೇ ದಿಕ್ಕು. ತಮ್ಮ ನೆಚ್ಚಿನ ದೈವ, ಕುಲದೈವ ವೆಂಕಟೇಶಸ್ತೋತ್ರದ ಹೊರತು ಬೇರೆ ಉಚ್ಚಾರವೇ ಅವರಿಗಿರಲಿಲ್ಲ. ನಿನ್ನಲ್ಲೇ ಶರಣು ಬಂದಿದ್ದೇನೆ ನೀನಿಲ್ಲದೇ ನನಗೆ ಅನ್ಯ ಬಂಧುವಿಲ್ಲ ಎಂದ ವೆಂಕಣ್ಣನಿಗೆ ಸಾಕ್ಷಾತ್ ಶೀನಿವಾಸನೇ ಬಂದು ಅನುಗ್ರಹಿಸಿದಂತೆ ಭಾಸವಾಯಿತು. ಅವರ ನಾಲಿಗೆಯ ಮೇಲೆ " ಪ್ರಸನ್ನ ವೆಂಕಟ " ಅಂಕಿತ ಬರೆದಂತೆ ಭಾಸವಾಯಿತು. ಮುಂದೆ ಅವರು ಪ್ರಸನ್ನ ವೆಂಕಟ ಅಂಕಿತದಿಂದಲೇ ಅವರು ಕೃತಿಗಳನ್ನು ರಚಿಸಿದರು. ಅವರ ಪ್ರಮುಖ ಕೃತಿಗಳು:

1) ಸತ್ಯಭಾಮಾ ವಿಲಾಸ

2) ಸಮಸ್ತನಾಮ ಮಣಿಗಣ ಷಟ್ಚರಣ ಪದ್ಯಮಾಲಾ

3) ಭೇದಮುಕ್ತಾವಳಿ

4) ನಾರದ ಕೊರವಂಜಿ

5) ಪ್ರಸನ್ನ ವೆಂಕಟ ಭಾಗವತ ದಶಮಸ್ಕಂದ ಪೂರ್ವಾರ್ಧ

6) ನಾರಾಯಣ ಪಂಜರ

"ಸತ್ಯಭಾಮಾ ವಿಲಾಸ"ಕ್ಕೆ ಇನ್ನೊಂದು ಹೆಸರು "ಶ್ರೀಕೃಷ್ಣ ಪಾರಿಜಾತ." ಇಲ್ಲಿ ಪಾರಿಜಾತ ಪ್ರಕರಣದ ಹಿನ್ನೆಲೆಯಾಗಿ ಸತ್ಯಭಾಮೆ ಮತ್ತು ಶ್ರೀಕೃಷ್ಣರ ನಡುವೆ ನಡೆದ ಸರಸ ಸಲ್ಲಾಪದ ಸಂಭಾಷಣೆಯ ಈ ಕೃತಿಯ ರಚನೆ ಅದ್ಭುತವಾಗಿದೆ. ಅವರ "ಸಮಸ್ತನಾಮ ಮಣಿಗಣ ಷಟ್ಚರಣ ಪದ್ಯಮಾಲಾ" ಕೃತಿಯಲ್ಲಿ ಸಂಪೂರ್ಣ ಹರಿಸ್ತುತಿಯು ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. "ಭೇದಮುಕ್ತಾವಳಿಯು" ಕೋಲಾಟ ಪದದ ಧಾಟಿಯಲ್ಲದೆ. ಶ್ರೀಮದಾಚಾರ್ಯರನ್ನು ಮೊದಲಾಗಿರಿಸಿಕೊಂಡು ತಾರತಮ್ಯಾನುಸಾರ ದೇವತಾಸ್ಮರಣೆಯಾಗಿದೆ. ಮತ್ತೊಂದು ಪ್ರಮುಖ ದೀರ್ಘ ಕೃತಿ ನಾರದ ಕೊರವಂಜಿಯಾಗಿದೆ. ಇದರಲ್ಲಿ ವಚನಗಳು ಮತ್ತು ಹಾಡುಗಳಿವೆ. ಶ್ರೀಕೃಷ್ಣಾವತಾರಿ ಹರಿಯು ಕೊರವಂಜಿವೇಶ ಧರಿಸಿ ರುಕ್ಮಿಣಿಗೆ ಅಭಯವಿತ್ತ ಸನ್ನಿವೇಶ ಬರುವುದು. ಇನ್ನೊಂದು ಮಹತ್ವವಾದ ಕೃತಿ "ಪ್ರಸನ್ನ ವೆಂಕಟ ಭಾಗವತ ದಶಮಸ್ಕಂದ ಪೂರ್ವಾರ್ಧ" ಆಗಿದೆ. ಇಲ್ಲಿ ಶ್ರೀಕೃಷ್ಣನ ಬಾಲಲೀಲೆಗಳನ್ನು ಕೊಂಡಾಡುವ ಬಿಡಿ ಕೀರ್ತನೆಗಳಿವೆ. ಇದು ಸಂಸ್ಕೃತ ಭಾಗವತದ ಕನ್ನಡ ರೂಪಾಂತರವಾಗಿದೆ. ಇವರ ಇನ್ನೊಂದು ಕೃತಿ "ನಾರಾಯಣ ಪಂಜರ". ಇದರಲ್ಲಿ ನಾರಾಯಣನ ವಿವಿಧ ರೂಪಗಳು ಆದಿಯಾಗಿದ್ದು ಇಡಿ ರಾಮಾಯಣ, ಮಹಾಭಾರತ ಮತ್ತು ಭಾಗವತಗಳನ್ನು ಕಣ್ಮುಂದೆ ನಿಲ್ಲುವಂತೆ ವರ್ಣಿಸಿದ್ದಾರೆ. ಆತ್ಮನಿವೇದನೆ ಇದೆ.

**ದಶಾವತಾರದ ಹಿನ್ನೆಲೆ:-**ದಾಸ ಸಾಹಿತ್ಯದ ಮೇರು ರಚನೆಗಳಲ್ಲಿ ದಶಾವತಾರಗಳ ವರ್ಣನೆ ಹರಿದಾಸರುಗಳ ಅದ್ಭುತ ಸೃಷ್ಠಿ ಎನಿಸಿದೆ. ದಶಾವತಾರಗಳು ಮೂಲವಾಗಿ ದಶಾವತಾರದ ಸ್ತುತಿ ಸ್ತೋತ್ರಗಳು ಶ್ರೀಮದ್ಭಾಗವತದಿಂದ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ. ಶ್ರೀಮದ್ಭಾಗವತದ **ಎರಡನೆಯ ಸ್ಕಂಧ ಏಳನೆಯ ಅಧ್ಯಾಯ**ದಲ್ಲಿ ದಶಾವತಾರ ಸ್ತೋತ್ರಗಳು, ದಶಮಸ್ಕಂಧದ ೩೮ನೆಯ ಅಧ್ಯಾಯದಲ್ಲಿ ಅಕ್ರೂರಕೃತ ದಶಾವತಾರ ಸ್ತುತಿ, 4ನೆಯ ಅಧ್ಯಾಯದ ಆರನೆಯ ಸ್ಕಂಧದಲ್ಲಿ ದಶಾವತಾರ ಮೂರ್ತಿಗಳ ಪ್ರಾರ್ಥನೆ ಗಳು ಉಲ್ಲೇಖಿತವಾಗಿವೆ. ನಂತರದಲ್ಲಿ **ಆದಿತ್ಯ ಪುರಾಣದ ಶ್ರೀವೆಂಕಟೇಶ ಮಹಾತ್ಮ್ಯೆಯಲ್ಲಿ** ದಶಾವತಾರದ ಸ್ತುತಿಸಿರುವುದು ಕಂಡುಬರುತ್ತದೆ. ದಶಾವತಾರದ ಒಂದೊಂದೇಅವಾರವನ್ನು ವರ್ಣಿಸುತ್ತಾ ಶ್ರೀನಿವಾಸನ ಸ್ಮರಣೆ ಮಾಡಿರುವ ಸ್ತೋತ್ರಗಳು ಕಂಡುಬರುತ್ತವೆ.

**ವೇದೋದ್ಧಾರಂ ಮತ್ಸ್ಯ ರೂಪಂ ಸ್ವಚ್ಛಾಕಾರಂ ಯದೃಚ್ಛಯಾ**

**ಸತ್ಯವ್ರತೋದ್ಧರಂ ಸತ್ಯ ಶ್ರೀನಿವಾಸಂ ಭಜೇ..ನಿಶಮ್**

ಅರ್ಥವೇನೆಂದರೆ, ಹಯಗ್ರಿವಾಸುರನು ಅಪಹರಿಸಿದ ವೇದಗಳನ್ನು ಉದ್ಧರಿಸಿ ಚತುರ್ಮುಖನಿಗೆ ತಂದುಕೊಟ್ಟವನು. ಮತ್ಸ್ಯ ರೂಪವುಳ್ಳವನು. ಮತ್ಸ್ಯದ ಆಕಾರವುಳ್ಳವನಾದರೂ ತುಚ್ಛಾಕಾರವುಳ್ಳವನಲ್ಲ. ಅತಿಸುಂದರವಾದ ಆಕಾರಧರಿಸಿದವನು. ಪ್ರಳಯ ಜಲದಲ್ಲಿ ಸತ್ಯವ್ರತನೆಂಬ ರಾಜರ್ಷಿಯನ್ನು ಉದ್ಧರಿಸಿ ಸತ್ಯನೆನಿಸಿಕೊಂಡವನು. ಇಂತಹ ಶ್ರೀನಿವಾಸನನ್ನು ಭಜಿಸುತ್ತೇನೆ.

**ಭವಿಷ್ಯೋತ್ತರ ಪುರಾಣ, ಕಲ್ಕಿ ಪುರಾಣ**ಗಳಲ್ಲಿ ಶ್ರೀದಶಾವತಾರದ ಸ್ತೋತ್ರಗಳು ಉಲ್ಲೇಖಿತವಾಗಿವೆ. ಅಲ್ಲದೇ ದಶಾವತಾರವು ಶ್ರೀ ದಾಮೋದರ ಸ್ತೋತ್ರಗಳಲ್ಲಿರುವುದನ್ನು ಕಾಣುತ್ತೇವೆ. **ಶ್ರೀಮನ್ ಮಹಾಭಾರತ ತಾತ್ಪರ್ಯನಿರ್ಣಯ**ದಲ್ಲಿ ದಶಾವತಾರದ ಸ್ತೋತ್ರಗಳು ರಚಿತವಾಗಿರುದು ಕಂಡುಬರುತ್ತದೆ.

**ವರಾದಜೇಯತ್ವಮವಾಪ ದೈತ್ಯರಾಟ್**

**ಚತುರ್ಮುಖಸ್ಯೈವ ಬಲಿರ್ಯದಾ ತದಾ।**

**ಅಜಾಯತೇಂದ್ರಾವರಜೋ$ದಿತೇ:ಸುತೋ**

**ಮಹಾನಜೋ$ಪ್ಯಬ್ಜಭವಾದಿಸಂಸ್ತುತ:॥**

ಇಂತಹ ಹಲವಾರು ಸ್ತೋತ್ರಗಳನ್ನು ಶ್ರೀಮನ್ ಮಹಾಭಾರತ ತಾತ್ಪರ್ಯನಿರ್ಣಯದಲ್ಲಿರುವುದು ಕಂಡುಬರುತ್ತವೆ.

ನಂತರದಲ್ಲಿ ಶ್ರೀ ಮಧ್ವ ಮತ ಸಂಸ್ಥಾಪಕರಾದ ನಮ್ಮ ಗುರುಗಳಾದ ಶ್ರೀಮಧ್ವಾಚಾರ್ಯರು ರಚಿಸಿದ ದಿವ್ಯ ಕೃತಿಯಾದ ದ್ವಾದಶಸ್ತೋತ್ರದ ಆರನೆಯ ಅಧ್ಯಾದಲ್ಲಿ ಮತ್ತು ಒಂಭತ್ತನೆಯ ಅಧ್ಯಾಯದಲ್ಲಿ

ದಶಾವತಾರವನ್ನು ಸ್ತುತಿಸಿದ್ದಾರೆ. ಈ ಪದ್ಯವನ್ನು ಉತ್ತರಾಧಿಮಠಾಧೀಶರು ಸಲ್ಲಿಸುವ ತೊಟ್ಟಿಲಸೇವೆ ಸಮಯದಲ್ಲಿ ಇಂದಿಗೂ ಶಿಷ್ಯರು ಹಾಡುತ್ತಾರೆ.

**ಮತ್ಸ್ಯಕರೂಪ ಲಯೋದವಿಹಾರನ್ ವೇದವನೇತೃ ಚತುರ್ಮುಖ ವಂದ್ಯ।**
**ಕೂರ್ಮಸ್ವರೂಪಕ ಮಂದರಧಾರಿನ್ ಲೋಕವಿಧಾರಕ ದೇವವರೇಣ್ಯ॥**
**ಸೂಕರರೂಪಕ ದಾನವ ಶತ್ರೋ ಭೂಮಿವಿಧಾರಕ ಯಜ್ಞವರಾಂಗ।**
**ದೇವನೃಸಿಂಹ ಹಿರಣ್ಯಕ ಶತ್ರೋ ಸರ್ವಭಯಾಂತಕ ದೈವತ ಬಂಧೋ**

ಆಕರ ಗ್ರಂಥ: ಶ್ರೀ ದಶಾವತಾರಸ್ತೋತ್ರಮಂಜರೀ(ಕನ್ನಡ ಭಾವಾರ್ಥಸಹಿತ)ಸಂಗ್ರಹ-ಅನುವಾದ ಶ್ರೀ ಶ್ರೀನಿವಾಸ. ಸು. ಮಠದ 2001

ಯತಿಶ್ರೇಷ್ಠರೆನಿಸಿದ, ದಾಸ ಶ್ರೇಷ್ಠರೆನಿಸಿದ ಶ್ರೀ ವಾದಿರಾಜತೀರ್ಥರು ರಚಿಸಿದ ಶ್ರೀ ರುಕ್ಮಿಣೀಶ ವಿಜಯ ಮಹಾಕಾವ್ಯದಲ್ಲಿ ಹದಿನೇಳನೆಯ ಸರ್ಗದಲ್ಲಿ ದಶಾವತಾರ ವರ್ಣನೆಯನ್ನು ಸ್ತೋತ್ರಗಳಲ್ಲಿ ರಚಿಸಿರುವುದು ಕಂಡುಬರುತ್ತದೆ. ಅವರು ಅಷ್ಟೇ ಅಲ್ಲದೇ ಪ್ರೋಷ್ಠೀಶವಿಗ್ರಹ ಸುನಿಷ್ಠೀವನೋದ್ಧತವಿಶಿಷ್ಟಾಂಬುಚಾರಿ ಜಲಧೇ ಎಂಬ ದಶಾವತಾರ ಸ್ತೋತ್ರವನ್ನೇ ರಚಿಸಿದ್ದಾರೆ. ಅಲ್ಲದೇ ಶ್ರೀ ವಾದಿರಾಜತೀರ್ಥರು ನಾಲ್ಕು ಪದ್ಯಗಳಲ್ಲಿಯೇ ದಶಾವತಾರಸ್ತೋತ್ರಮ್ ರಚಿಸಿ ಇಡೀ ದಶಾವತಾರವನ್ನು ಸೃಷ್ಟಿಸಿದ್ದಾರೆ.

ಶ್ರೀ ವಿಜಯಧ್ವಜ ತೀರ್ಥರು 11 ನುಡಿಗಳಲ್ಲಿ ದಶಾವತಾರವನ್ನು ರಚಿಸಿದ್ದಾರೆ.ಮುಂದೆ ಶ್ರೇಷ್ಠಗುರುಗಳೆನಿಸಿದ ಶ್ರೀ ಯಾದವಾರ್ಯರು ತಮ್ಮ ಶ್ರೀ ವೇದವ್ಯಾಸಕರಾವಲಂಬನ ಸ್ತೋತ್ರದಲ್ಲಿ 16 ಪದ್ಯಗಳಲ್ಲಿ ಶ್ರೀ ದಶಾವತಾರವನ್ನು ವರ್ಣಿಸಿರುವುದು ಕಂಡುಬರುತ್ತದೆ. ಉತ್ತರಾದಿ ಮಠದ ಯತಿ ಪರಂಪರೆಯಲ್ಲಿ ಬರುವ ಯತಿ ಶ್ರೇಷ್ಠರೆನಿಸಿದ ಶ್ರೀ ಸತ್ಯಸಂಧತೀರ್ಥರು ವಿಷ್ಣುಸ್ತುತಿಯಲ್ಲಿ ಮತ್ತು ಶ್ರೀ ಸತ್ಯಸಂಧವಿಜಯ ಕಾವ್ಯದಲ್ಲಿ ದಶಾವತಾರ ಸ್ತೋತ್ರಗಳನ್ನು ರಚಿಸಿರುವುದನ್ನು ಕಾಣುತ್ತೇವೆ.

ಶ್ರೀ ನಾರಾಯಣ ಪಂಡಿತಾಚಾರ್ಯರು **ವಾಸುದೇವ ಗೀತ:** ಕೃತಿಯಲ್ಲಿ 7 ಪದ್ಯಗಳಲ್ಲಿ ದಶಾವತಾರವನ್ನು ಸ್ತುತಿಸಿದ್ದಾರೆ. ಶ್ರೀ ಆಕುಚಕವಿನಂದನವಿರಚಿತವಾದ ರಮೇಶ ಗೀತ:, ಶ್ರೀ ಕೋನೇರಿ ಆಚಾರ್ಯರ ದಶಾವತಾರ ಸ್ತೋತ್ರಮ್

ಈ ಎಲ್ಲ ವಿವರಣೆಯು ನಮಗೆ ಶ್ರೀ ಶ್ರೀನಿವಾಸ. ಸು. ಮಠದ ರವರ

ಶ್ರೀ ದಶಾವತಾರಸ್ತೋತ್ರಮಂಜರೀ(ಕನ್ನಡ ಭಾವಾರ್ಥಸಹಿತ)ಸಂಗ್ರಹ-ಅನುವಾದ ಕೃತಿಯಲ್ಲಿ ದೊರಕುತ್ತದೆ.ಅವರು ಶ್ರೀ ದಶವತಾರದ ಪರಿಚಯ, ಕಾಲ, ಶ್ರೀ ದಶಾವತಾರದಲ್ಲಿ ಶ್ರೀ ಲಕ್ಷ್ಮೀದೇವಿಯರ ರೂಪಗಳು, ಶ್ರೀ ದಶಾವತಾರದಲ್ಲಿ ಭಗವಂತನ ಕಾರ್ಯಗಳು, ಮತ್ತು ಪಂಚಜ್ಞಾನೇಂದ್ರೀಯಗಳಲ್ಲಿ ಪಂಚ ಕರ್ಮೇಂದ್ರಿಯಗಳಲ್ಲಿ ನಿಯಾಮಕನಾದ ಭಗವಂತನ ರೂಪಗಳು, ವಿವಿಧ ತೀರ್ಥಗಳಲ್ಲಿ ದಶಾವತಾರ ರೂಪಗಳು, ದಶಾವತಾರ ಮಂತ್ರಗಳು, ದಶಾವತಾರ ಸುಪ್ರಭಾತಮ್, ದಶಾವತಾರ

ಆಕರ ಗ್ರಂಥ: ಶ್ರೀ ದಶಾವತಾರಸ್ತೋತ್ರಮಂಜರೀ(ಕನ್ನಡ ಭಾವಾರ್ಥಸಹಿತ)ಸಂಗ್ರಹ-ಅನುವಾದ ಶ್ರೀ ಶ್ರೀನಿವಾಸ. ಸು. ಮಠದ 2001

ಪುರಾಣಗಳು, ಮತ್ತು ದಶಾವತಾರ ಮೂರ್ತಿಗಳ ಲಕ್ಷಣಗಳನ್ನು ಸಂಗ್ರಹಿಸಿ ನೀರೂಪಿಸಿದ್ದಾರೆ. ಇವರ ಸಂಗ್ರಾಹ್ಯ ಗ್ರಂಥ ನನಗೆ ನಿಜವಾದ ಮಾರ್ಗದರ್ಶಿಯಾಯಿತು.

ಮೇಲಿನ ವಿವರಣೆಯನ್ನು ಅವಲೋಕಿಸಿದಾಗ ದಶಾವತಾರಗಳ ಮೇಲಿನ ಸಾಹಿತ್ಯ ರಚನೆಯ ಒಂದು ಪರಂಪರೆಯು ಶ್ರೀಮದ್ಭಾಗವತದಿಂದ ಆದಿಗೊಂಡು ಪುರಾಣಗಳಲ್ಲಿ, ಮಾಹಾಭಾರತ ತಾತ್ಪರ್ಯನಿರ್ಣಯದಲ್ಲಿ ಶ್ರೀ ,ಮಧ್ವಾಚಾರ್ಯರಾದಿಯಾಗಿ ಯತಿವರೇಣ್ಯರು, ಪಂಡಿತೋತ್ತಮಾಚಾರ್ಯರೆಲ್ಲರೂ ರಚಿಸಿರುವುದು ತಿಳಿದುಬರುತ್ತದೆ.

ಇವರೆಲ್ಲರ ಸಾಹಿತ್ಯ ರಚನೆಯೂ ಸಂಸ್ಕ್ರತದಲ್ಲಿದೆ.

ಹರಿದಾಸರು ಮಾಡಿದ ಮಾಹಾಕಾರ್ಯವೆಂದರೆ ದಶಾವತಾರದ ವರ್ಣನೆಯ ಸಾಹಿತ್ಯವನ್ನು ಕನ್ನಡದಲ್ಲಿ ರಚಿಸುವುದರ ಮೂಲಕವಾಗಿ ಸಾಮಾನ್ಯರಿಗೂ ಅರ್ಥವಾಗುವಂತೆ ಮಾಡಿದ್ದಾರೆ.

ಹರಿದಾಸ ಪರಂಪರೆಯಲ್ಲಿರುವ ಬಹುತೇಕ ಎಲ್ಲ ದಾಸರೂ ದಶಾವತಾರದ ವರ್ಣನೆಯನ್ನು ಮಾಡಿರುತ್ತಾರೆ. ಕೋಲಾಟ ಪದ್ಯ, ಜೋಗುಳಪದ್ಯ, ಮಂಗಳಾರುತಿ ಪದ್ಯ ಮತ್ತು ಹತ್ತು ಅವತಾರಗಳನ್ನು ವರ್ಣಿನಿಸುವ ಹತ್ತು ನುಡಿ ಪದ್ಯ, ಒಂದೇ ನುಡಿಯಲ್ಲಿ ಹತ್ತು ಅವತಾರಗಳು ಹೀಗೆ ವಿವಿಧ ಬಗೆಯಲ್ಲಿ ತಮ್ಮದೇ ಆದ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಶ್ರೀರಾಮಾವತಾರ ಹಾಗೂ ಶ್ರೀಕೃಷ್ಣಾವತಾರದ ವರ್ಣನೆ ಇರುವ ಕೀರ್ತನೆಗಳೂ ಸಾಕಷ್ಟು ಇವೆ.

ಆಕರ ಗ್ರಂಥ: ಶ್ರೀ ದಶಾವತಾರಸ್ತೋತ್ರಮಂಜರೀ(ಕನ್ನಡ ಭಾವಾರ್ಥಸಹಿತ)ಸಂಗ್ರಹ-ಅನುವಾದ ಶ್ರೀ ಶ್ರೀನಿವಾಸ. ಸು. ಮಠದ 2001

## ಶ್ರೀ ಪ್ರಸನ್ನ ವೆಂಕಟದಾಸರು ರಚಿಸಿದ ದಶಾವತಾರ ಕೃತಿಗಳ ನನ್ನ ಅಧ್ಯಯನ

ಶ್ರೀ ಪ್ರಸನ್ನವೆಂಕಟದಾಸರು ದಶಾವತಾರ ವರ್ಣಿಸುವ ಹಲವಾರು ಕೃತಿಗಳನ್ನು ರಚನೆ ಮಾಡಿದ್ದಾರೆ. ನಾನು ಇಲ್ಲಿಯವರೆಗೆ ದಾಸರ 68 ಕೃತಿಗಳ ಅಧ್ಯಯನವನ್ನು "ಸಮಗ್ರ ದಾಸ ಸಾಹಿತ್ಯ" ಸಂಪುಟ -8 ಪ್ರಕಟಗೊಂಡ ಕೃತಿಗಳಲ್ಲಿ 60 ಪದ್ಯಗಳು ಮತ್ತು 8 ಸುಳಾದಿಗಳುಅಧ್ಯಯನ ಮಾಡಿದ್ದೇನೆ. ಇವುಗಳಲ್ಲಿ ಪದ್ಯಗಳಲ್ಲಿಯ ವೈಶಿಷ್ಠತೆ ಎಂದರೆ, ಪ್ರತಿಯೊಂದು ಕೃತಿಗೂ ತನ್ನದೇ ವೈಶಿಷ್ಠತೆ ಇರುವುದು ಕಂಡುಬರುತ್ತದೆ.ಒಂದು ಕೃತಿಯೂ ಮತ್ತೊಂದು ಕೃತಿಯಿಂದಲೂ ಭಿನ್ನವಾಗಿದೆ. ಒಂದು ಕೃತಿಯಲ್ಲಿ ಒಂದು ನುಡಿಯಲ್ಲಿ ದಶಾವತಾರವನ್ನು ವರ್ಣಿಸಿದರೆ, ಮತ್ತೊಂದು ಕೃತಿಯು ಒಂದೇ ಶಬ್ದದಲ್ಲಿ ಒಂದೊಂದು ಅವತಾರವನ್ನು ವರ್ಣಿಸುತ್ತದೆ. ಇನ್ನೊಂದು ಕೃತಿಯಲ್ಲಿ ಗೂಢಅರ್ಥದಲ್ಲಿ (Hidden meaning) ಎರಡು ಅವತಾರಗಳನ್ನು ಸೃಷ್ಟಿಸಿರುವುದನ್ನು ಕಾಣುತ್ತೇವೆ. ದಾಸರ ಪ್ರತಿಯೊಂದು ಕೃತಿಗಳು ಭಿನ್ನ ವಿಭಿನ್ನವಾಗಿವೆ. ಇನ್ನು ಇತ್ತೀಚೆಗೆ ಅಂದರೆ 2014 ಸೆಪ್ಟೆಂರನಲ್ಲಿ ಬಿಡುಗಡೆಯಾದ "ಶ್ರೀ ಪ್ರಸನ್ನವೆಂಕಟದಾಸರ ಕೀರ್ತನೆಗಳು" ಸಂಪುಟ-2 ಡಾ॥ ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿಯವರು ಸಂಪಾದಿಸಿ ಸಂಗ್ರಹಿಸಿ ಪ್ರಕಟಿಸಿದ ಪುಸ್ತಕದಲ್ಲಿ, ದಾಸರ ಅದ್ಭುತ ಕೀರ್ತನೆಗಳ ಸಂಗ್ರಹವಾಗಿದೆ.ವಿಶೇಷ ಕೃತಿಗಳು ದೊರಕುತ್ತವೆ. 29 ದಶಾವತಾರವನ್ನೊಳಗೊಂಡ ಕೀರ್ತನೆಗಳಲ್ಲಿ 11 ಕೀರ್ತನೆಗಳು ಸಂಪೂರ್ಣ ದಶಾವತಾರವನ್ನು ವರ್ಣಿಸುವ ಕೃತಿಗಳಾಗಿರುತ್ತವೆ. ಉಳಿದ ಕೃತಿಗಳಲ್ಲಿ ಮಧ್ಯದಲ್ಲಿ 3,4, 2, 6, 9 ಅವತಾರಗಳನ್ನು ವರ್ಣಿಸಿರುವು ಕಂಡುಬರುತ್ತದೆ.ಅದರಲ್ಲಿ 16 ಕೃತಿಗಳು ಶ್ರೀಕೃಷ್ಣನ ಬಾಲಲೀಲೆಯನ್ನು ವರ್ಣಿಸಿದರೆ, 53 ಕೃತಿಗಳು ಶ್ರೀಕೃಷ್ಣನ ಸಂಪೂರ್ಣ ಲೀಲಾ ವಿನೋದಗಳನ್ನು ವರ್ಣಿಸುವ ಕೃತಿಗಳಾಗಿವೆ. 5 ಕೃತಿಗಳು ಸಂಪೂರ್ಣ ರಾಮಾವತಾರವನ್ನು ವರ್ಣಿಸುವ ಕೃತಿಗಳಾಗಿರುತ್ತವೆ.ಇನ್ನು ಒಂದು ವಿಶೇಷ ಕೃತಿ ಎಂದರೆ ಶ್ರೀ ನರಸಿಂಹಾವತಾರ ಅವಿರ್ಭವಿಸಿದ ಕೃತಿ." ಜಯತು ಜಯತು ಜಯತು ಲಕ್ಷ್ಮೀವರ ಮನೋಹರ ಜಯತು" ಈಕೃತಿಯಲ್ಲಿ

ಆ.ಗ್ರ." ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು " ಸಂ-2 ಪು.ಸಂ.33 ಸಂಪಾದಕ&ಸಂಗ್ರಾಹಕರು ಡಾ॥ ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿ

ಶ್ರೀ ನರಸಿಂಹ ಯಾವ ರೀತಿಯಲ್ಲಿ ಆರ್ಭಟಿಸಿ ಕಂಭದಿಂದ ಬಂದನು ಎಂಬ ಪ್ರತ್ಯಕ್ಷ ರೂಪ ಕಣ್ಮುಂದೆ ಬಂದಂತೆ ಅನಿಸುತ್ತದೆ.

ಕಿಟಕಿಟಲ್ಕಿಟ ಚಿಟ ಚಿಟಲ್ ಚಿಟ

ತಟಿತರ್ಭಟ ಕಿಡಿಯೊಳು।

ಕುಟಿಲ ಖಳಗುತ್ಕಟ ದರಣಿ ಪ್ರ-

ಕಟಿಸಿ ಸಂಕಟ ಪುಟ್ಟಿಸಿದೇ।

ಪಟುಭಟರ ಚೌಪಟ ಕಠಿಣ ಸ-

ತ್ಸಟವನ್ನುಚ್ಚಿಸಿನಿಟಸುತಾ।

ನಿಟಿಲವನ್ಹಿಯ ಪುಟಿಸಿ ಖಳಕುಲ।

ದಟಣಿದಹರಟರಟಿಸಿದೆ.

ಘುಡ ಘುಡಿ ಘುಡಿಸುತಾ ಹಿಡಿಹಿಡಿಯನ್ನುತ।

ಕಡಕಡ ಸ್ತಂಭವನೊಡೆಯುತಾ।

ಕಡುಕಡುಕಡು ಕೋಪದಿ ಕಿಡಿಕಿಡಿಯುಗುಳುತಾ।

ಕೆಡೆಕೆಡೆ ಕೆಡೆಯೆಂದು ಕ್ಯಡುವುತಾ।

ತೊಡಿಯಲಡುತವನೋಡುಲೊಡವುತಾ।

ನಿಡುಗರಳಪಡಿಕಿಲಿ ಪಿಡಿಯುತಾ।

ಒಡನೊಡನೆ ಕಂಠದೆಡೆಲಳವಡಿಸಿದೆ

ವಡಿಯನೊಡಿಯ ದೃಢ ಚಲಿತನೆ.

ಇಲ್ಲಿ 'ಟ' ಪ್ರಾಸ 'ಡ' ಪ್ರಾಸವನ್ನು ಗಮನಿಸಬೇಕು. ಈ ನುಡಿಯನ್ನು ಕೇಳಿದರೆ ನಮ್ಮ ಕಣ್ಮುಂದೆಯೇ ನರಸಿಂಹಾವತಾರವಾಗುತ್ತಿರುವ ಭಾವ ಬರುತ್ತದೆ.ಇದು ದಾಸರ ಅತ್ಯದ್ಭುತ ರಚನೆಯೇ ಸರಿ

ಆ.ಗ್ರ." ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು " ಸಂ-2 ಪು.ಸಂ.33 ಸಂಪಾದಕ&ಸಂಗ್ರಾಹಕರು ಡಾ॥ ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿ

ದಾಸರು ರಚಿಸಿದ ಕೋಲಾಟದ ಪದ್ಯವಾದ

" ಕೋಲು ಕಾಮನಗೆದ್ದ ಕೋಲು ಮಾಯ್ಗಳನೊದ್ದ

ಕೋಲು ಆನಂದಮುನಿಪಿಡಿದಿಹ ಕೋಲೆ" ಈ ಪದ್ಯವು 11 ನುಡಿಗಳದ್ದಾಗಿರುತ್ತದೆ.ಪ್ರತಿಯೋಂದು ನುಡಿಯಲ್ಲಿ ಒಂದೊಂದು ಅವತಾರ ಮತ್ಸ್ಯವತಾರದಿಂದಾರಂಭಗೊಂಡು ಕಲ್ಕಿ ಅವಾತಾರದವರೆಗೂ ಹತ್ತು ಅವತಾರಗಳನ್ನು ಕ್ರಮವಾಗಿ ವರ್ಣಿಸಿರುತ್ತಾರೆ. ಶ್ರೀ ಮಹಿಪತಿದಾಸರು ರಚಿಸಿದ

" ಕೋಲು ಕೋಲೆನ್ನ ಕೋಲೆ

ಕೋಲು ಶ್ರೀ ಗುರುವಿನ ಬಲಗೊಂಬೆ ಕೋಲೆ" ಈ ಪದ್ಯವನ್ನು ಹೋಲುತ್ತದೆ

" ಶಿಕ್ಷಿಸಿ ನಿಗಮ ಚೋರ ರಾಕ್ಷಸನ ಕೊಂದು

ರಕ್ಷಿಸಿ ವೇದವನುಳುಹಿದ ಕೋಲೆ

ರಕ್ಷಿಸಿ ವೇದವನುಳುಹಿದ ಕ್ಷಿತಿಯೊಳು

ಮಚ್ಛಾವತಾರನ ಬಲಗೊಂಬೆ ಕೋಲ"

ಎಂದು ಮಚ್ಛಾವತಾರವನ್ನು ವರ್ಣೀಸಿದರೆ ಶ್ರೀ ಪ್ರಸನ್ನವೆಂಕಟದಾಸರು,

" ತಮನೆಂಬುವನ ಕೊಂದು ಕಮಲಜನಿಗೆ ವೇದ

ಕ್ರಮದಿಂದ ಕೊಟ್ಟು ಜಗವನು ಕೋಲೆ

ಕ್ರಮದಿಂದ ಕೊಟ್ಟು ಜಗವನು ರಕ್ಷಿಸಿದ

ವಿಮಲ ಶ್ರೀ ಮತ್ಸ್ಯ ಮನೆದೈವಕೋಲೆ"

ಈರ್ವರ ಕೃತಿಗಳಲ್ಲಿ ಸಾಮ್ಯತೆ ಎಂದರೆ ಪ್ರಾಸ ಒಂದೇ ತೆರನಾಗಿದೆ. ಎರಡನೆ ಸಾಲನ್ನು ಪುನರುಚ್ಛರಿಸಿದ್ದಾರೆ. ಮಹಿಪತಿದಾಸರು ವೇದಗಳನ್ನು ರಕ್ಷಿಸಿದ ಎಂದರೆ, ಪ್ರಸನ್ನವೆಂಕಟದಾಸರು ಕಮಲಜನಿಗೆ ಅಂದರೆ ಬ್ರಹ್ಮನಿಗೆ ವೇದ ಕ್ರಮದಿಂದ ನೀಡಿದ ಎಂಬ ಉಲೇಖ ಮಾಡಿ ವೈಶಿಷ್ಟತೆಯನ್ನು ಮೆರೆದಿದ್ದಾರೆ.

ಶ್ರೀ ಪ್ರಸನ್ನವೆಂಕಟದಾಸರ ಇನ್ನೊಂದು ಕೃತಿಯು ಶ್ರೀ ಕನಕದಾಸರ ದಶಾವತಾರದ ಕೃತಿ ಶೈಲಿಯನ್ನು ಹೋಲುತ್ತದೆ.

ಆ.ಗ್ರ." ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು " ಸಂ-2 ಪು.ಸಂ.33 ಸಂಪಾದಕ&ಸಂಗ್ರಾಹಕರು ಡಾ॥ ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿ

ಆ.ಗ್ರ. ಸಮಗ್ರ ದಾಸ ಸಾಹಿತ್ಯ ಸಂ:-6 ಕಾಖಂಡಕಿಯ ಶ್ರೀ ಮಹಿಪತಿದಾಸರು

"ದೇವಿನಮ್ಮ ದ್ಯಾವರು ಬಂದಾರೆ ಬನ್ನೀರೇ ನೋಡ ಬನ್ನೀರೇ" ಇದು ಕನಕದಾಸರ ಕೃತಿಯಾದರೆ,

"ದೇವಿಯನೆತ್ತಿದನಾರಲಮ್ಮಾ ನಮ್ಮ

ದೇವ ಸಿಪತಿ ಕಾಣೆಲಮ್ಮಾ

ದೇವಿ ನಮ್ಮ ದೇವರು ಬಂದರು ಕಾಣಮ್ಮ"

ಇದು ಪ್ರಸನ್ನವೆಂಕಟದಾಸರ ಕೃತಿಯಾಗಿದೆ.

ಶ್ರೀ ಪ್ರಸನ್ನವೆಂಕಟದಾಸರು ರಚಿಸಿದ ಸಖ್ಯಭಾವವನ್ನು ಸ್ತುತಿಸುವ ಒಂದು ಪದ್ಯವಾದ

ಏನು ಕಾರಣ ಮರೆತೆ ಎಲೆ ಉಡುಪಿನಿಲಯ
ಆನೊಬ್ಬ ಜಗಕೊಡೆಯನೆಂಬಹಂಕಾರವೋ
ಈ ಕೃತಿ 5 ನೆಯ ಚರಣದಲ್ಲಿ
ಹೊದ ಶ್ರುತಿತಂದಮೃತ ಉಣಿಸಿ ಸುರರಿಗೆ ಖಳನ
ತೀಡಿ ಶಿಶುವನು ಪೊರೆದೆ ಗರ್ವದಿಂದ
ಭೂದೇವಿಯನ್ನಳೆದೆ ಖಳರೊದ್ದೆ ಅರಸಾದೆ
ನೀ ದೇವಿಯ ಧರಿಸಿ ಸಿರಿ ಪ್ರಸನ್ವೆಂಕಟೆನ್ನ ತುತಿ ಕೇಳದೆ.
ಇಲ್ಲಿ ಹೊದ ಶ್ರುತಿತಂದಮೃತ ಉಣಿಸಿ ಸುರರಿಗೆ

ಮೇಲ್ನೋಟಕ್ಕೆ ಈ ಸಾಲಿನಲ್ಲಿ ಮತ್ಸ್ಯಾವತಾರವಷ್ಟೇ ಗೋಚರವಾಗುತ್ತದೆ. ಇನ್ನೊಮ್ಮೆ, ಮತ್ತೊಮ್ಮೆ ಈ ಸಾಲನ್ನು ಓದಿದಾಗ "ಅಮೃತ ಉಣಿಸಿ" ಈ ಪದವು ಮೋಹಿನೀ ರೂಪಕ್ಕೆ ಸಂಬಂಧಪಡುತ್ತದೆ ಎಂದು "ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು ಸಂಪುಟ 2" ರಲ್ಲಿ ಪುಟ ಸಂಖೆ 45 ರಲ್ಲಿ ಸೂಚಿಸುತ್ತಾರೆ. ಆದರೆ ಮೇರು ಪರ್ವತ ಧರಿಸಿ ನಿಂತು ಎಲ್ಲ ಸುರರಿಗೂ ಅಮೃತದ ಪಾನ ಮಾಡಲು ಕಾರಣೀಕೃತ ಕೂರ್ಮಾವತಾರದ ವರ್ಣನೆಯನ್ನು ಕಾಣುತ್ತೇವೆ. ಈ ವರ್ಣನೆಯ ಬಗ್ಗೆ ನನಗೆ ಸ್ಪಷ್ಟೀಕರಣವಾಗಬೇಕಿದೆ. ನನ್ನ ಮುಂದಿನ ಅಧ್ಯಯನದಲ್ಲಿ ವಿದ್ವಾಂಸರಿಂದ ತಿಳಿದುಕೊಂಡು ಸ್ಪಷ್ಟೀಕರಣ ನೀಡಬಯಸುತ್ತೇನೆ.ಮುಂದೆ ನರಸಿಂಹಾವತಾರ ,ವಾಮನಾವತಾರ ಮತ್ತು ಶ್ರೀ ರಾಮಾವತಾರದ ವರ್ಣನೆಗಳು ಇರುವುದರಿಂದ, ಅದು ಕೂಮಾವತಾರದ ವರ್ಣನೆಯಾಗಿರಬೇಕು ಎಂಬುದನ್ನು ಪುಷ್ಟೀಕರಿಸುತ್ತದೆ.

ಆ.ಗ್ರ." ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು " ಸಂ-2 ಪು.ಸಂ.33 ಸಂಪಾದಕ&ಸಂಗ್ರಾಹಕರು ಡಾ॥ ಸುಭಾಸ ಕಾಖಂಡಕಿ ಮತ್ತು ಶ್ರೀಮತಿ ರೇಖಾ ಕಾಖಂಡಕಿ

ತೀಡಿ ಶಿಶುವನು ಪೊರೆದೆ-- ನರಸಿಂಹಾವತಾರದ ಭೂದೇವಿಯನ್ನಳೆದೆ ಖಳರೊದ್ದೆ -- ವರಾಹವತಾರವನ್ನು ಸೂಚಿಸುತ್ತದೆ.ಅರಸಾದೆ ನೀ ದೇವಿಯ ಧರಿಸಿ --- ಶ್ರೀ ರಾಮಾವತಾರವನ್ನು ವರ್ಣಿಸುತ್ತದೆ.

ಶ್ರೀ ಪ್ರಸನ್ನವೆಂಕಟದಾಸರು ರಚಿಸಿದ ಈ ಪದ್ಯ ವೈಶಿಷ್ಟತೆ ಎಂದರೆ ವರಾಹ ಅವತಾರದ ನಂತರ ನರಸಿಂಹಾವತಾರವಾಗಿರುವುದು ಪುರಾಣಗಳಲ್ಲಿ ಉಲ್ಲೇಖಿತ ವಿಷಯ. ಇಲ್ಲಿ ದಾಸರು ಮೊದಲು ನರಸಿಂಹಾವತಾರ ನಂತರ ವರಾಹ ಅವತಾರದ ವರ್ಣನೆಯನ್ನು ಮಾಡಿರುತ್ತಾರೆ. ಈ ವಿಷಯವು ಓದುಗರಿಗೆ ಮತ್ತು ಚಿಂತನಾಕಾರರಿಗೆ ಮತ್ತು ಸಂಶೋಧನಾಕಾರರಿಗೆ ಚಿಂತನೆಗೆ ಹಚ್ಚುತ್ತದೆ ಮೊದಲು ನರಸಿಂಹಾವತಾರವೋ ಅಥವಾ ವರಾಹ ಅವತಾರವೋ? ಹೀಗೆ ದಾಸರ ಪ್ರತಿಯೊಂದು ಕೃತಿಗಳು ನಮ್ಮನ್ನು ಚಿಂತನೆಯಲ್ಲಿ ತೊಡಗುವಂತೆ ಮಾಡುತ್ತವೆ. ಪ್ರತಿ ಪದ್ಯದ ಕೊನೆ ಸಾಲಿನಲ್ಲಿ ದಾಸರ ದೈನ್ಯತಾ ಭಾವ ಎದ್ದು ಕಾಣುತ್ತದೆ. ತಮ್ಮನ್ನು ತಾವು ಸಮರ್ಪಿಸಿಕೊಂಡಿರುದು ಕಂಡುಬರುತ್ತದೆ. ದಾಸರ ಪ್ರತಿ ಪದ್ಯದಲ್ಲಿಯೂ ದಾಸರು ಶ್ರೀ ಹರಿಯನ್ನು ಎಷ್ಟು ಕೊಂಡಾಡಿದರೂ ತೃಪ್ತಿಯೇ ಸಿಕ್ಕಿಲ್ಲ ಎಂಬ ತುಡಿತ ಅವರ ಪ್ರತಿ ಪದ್ಯದಲ್ಲಿ ವ್ಯಕ್ತವಾಗಿರುವುದು ಕಂಡು ಬರುತ್ತದೆ. ನಾನು ಎಂದೆಂದಿಗೂ ನಿನ್ನ ಸೇವಕನು ಎಂಬ ಭಾವವಿರುವುದನ್ನು ಅವರ ಕೃತಿಗಳಲ್ಲಿ ಕಂಡುಬರುವ ಮತ್ತೊಂದು ವೈಶಿಷ್ಟತೆಯಾಗಿದೆ.

## <u>ದಾಸಶ್ರೇಷ್ಠರ ಕೃತಿಗಳೊಂದಿಗೆ ತುಲನಾತ್ಮಕ ಅಧ್ಯಯನ</u>

ಶ್ರೀಪಾದರಾಯವಿರಚಿತ ದಶಾವತಾರದ ಜೋಗುಳದ ಪದ

ಜೋಜೋ ಜೋಜೋ ಜೋ ರಂಗಧಾಮ।
ಜೋಜೋ ಜೋಜೋ ಜೋ ರಣಭೀಮ।
ಜೋಜೋ ಭಕ್ತರ ಕಷ್ಟ ನಿರ್ಧೂಮ।
ಜೋಜೋ ದಶರಥರಾಮ ನಿಸ್ಸೀಮ ಜೋಜೋ ।।ಪ।।

ತಮನ ಮರ್ದಿಸಿ ವೇದತತಿಗಳನು ತಂದೆ।
ಸುಮನಸರಿಗಾಗಿ ಮಂದರಪೊತ್ತು ನಿಂದೆ।।
ನಮಿಸಿ ಪೋಗಿ ಹರಿಣ್ಯಾಕ್ಷನ ಕೊಂದೆ।
ನಮಿಸಿ ಕರೆಯಲು ಕಂಬದಿಂದಲಿನೀ ಬಂದೆ.

ತರಳನಾಗಿ ಬಲಿಯ ದಾನವ ಬೇಡ್ದೆ।

ಪರಶು ಧರಿಸಿ ಕ್ಷತ್ರಿಯರ ಸವರಿದೆ॥
ದುರುಳ ರಾವಣನ ಶಿರವ ಚಂಡಾಡಿದೆ।
ಚರಿಸಿ ಮನೆಮನೆಯ ಪಾಲುಮೊಸರನು ಮೆದ್ದೆ.

ಬುದ್ಧನಾಗಿ ಪತಿವ್ರತೇರನಾಳಿದೆಯಲ್ಲ।
ಮುದ್ದು ತುರುಗವನೇರಿ ಕಲ್ಕ್ಯನಾದೆಲ್ಲ
ಪದ್ಮನಾಭ ಸಿರಿ ಭಕ್ತವತ್ಸಲ।
ನಿದ್ರೆಯ ಮಾಡಯ್ಯ ಶ್ರೀ ರಂಗವಿಠ್ಠಲ.

ಈ ಮೂರು ನುಡಿಯ ಪದ್ಯದಲ್ಲಿ ಮೊದಲ ನುಡಿಯಲ್ಲಿ ಮತ್ಸ್ಯ, ಕೂರ್ಮ, ವರಾಹ, ಮತ್ತು ನರಸಿಂಹಾವತಾರ, ಎರಡನೆ ನುಡಿಯಲ್ಲಿ ವಾಮನ ಪರಶುರಾಮ,ರಾಮಾವತಾರ, ಕೃಷ್ಣಾವತಾರ ಹಾಗೂ ಮೂರನೆ ಚರಣದಲ್ಲಿ ಬೌದ್ಧ,ಕಲ್ಕಿ ಅವತಾರಗಳನ್ನು ವರ್ಣಿಸಿದ್ದಾರೆ.

ವ್ಯಾಸರಾಯರಿಂದ ವಿರಚಿತವಾದ

ಶರಣು ಮತ್ಸ್ಯನೆ ಕೂರ್ಮ ಕ್ರೋಡನೆ ನರಹರಿಯೆ ವಟು ಭಾರ್ಗವ।
ಶರಣು ರಾಘವ ಕೃಷ್ಣ ಬುದ್ಧನೆ ಶರಣು ಕಲ್ಕಿಯ ರೂಪನೆ॥

ನಂಬಿದೆನು ನಾ ನಿನ್ನ ಕೇಶವ ನಾರಾಯಣನೆ ಮಾಧವ।
ಅಂಬುಜಾಕ್ಷ ಗೋವಿಂದ ವಿಷ್ಣುವೆ ಸಂಭ್ರಮದಿ ಮಧುಸೂಧನ

ವಾಸವಾರ್ಚಿತ ಸಂಕರುಷಣ ವಾಸುದೇವ ಪ್ರದ್ಯುಮ್ನನೆ।
ಶ್ರೀಶ ಅನಿರುದ್ಧ ಪುರುಷೋತ್ತಮ ನೀ ಸಲಹೋ ಅಧೋಕ್ಷಜ

ಶ್ರತಿಗಗೋಚರ ನಾರಸಿಂಹಾಚ್ಯುತ ಜನಾರ್ದನುಪೇಂದ್ರನೆ
ಚತುರ್ವಿಂಶತಿ ನಾಮದಲ್ಲಿಹ ಚತುರ ಹರಿ ಶ್ರೀಕೃಷ್ಣನೆ

ಈ ಪದ್ಯದ ಮೊದಲ ನುಡಿಯಲ್ಲಿ ಹತ್ತು ಅವತಾರಗಳ ಸ್ಮೃಷ್ಠಿ ಇದೆ.ವಿಶೇಷವೆಂದರೆ ಕೊನೆ ನುಡಿಯಲ್ಲಿ ಮತ್ತೊಮ್ಮೆ ಮತ್ಸ್ಯಾವತಾರ ನಾರಸಿಂಹನ ಅವತಾರಗಳೊಂದಿಗೆ ಶ್ರೀ ಹರಿಯ ವಿವಿಧ ನಾಮಗಳನ್ನು ಸ್ಮರಿಸಿದ್ದಾರೆ.

ಆ.ಗ್ರ. ದಶಾವತಾರ ಪದಗಳು ಸಂಪಾದಕರು :-ರಾಜಾ ಎಸ್. ಗೋಪಾಲಾಚಾರ್ಯ
ಪ್ರಕಟಣೆ:-ಶ್ರೀ ಸುಶಮೀಂದ್ರ ಸೇವಾ ಪ್ರತಿಷ್ಠಾನ ಮೈಸೂರು.

ಶ್ರೀ ಪ್ರಸನ್ನ ವೆಂಕಟದಾಸರು ರಚಿಸಿದ ಜೋ ಗುಳ ಪದವಾದ

"ಲಾಲಿ ಮುಕುಂದ ಲಾಲಿ ಗೋವಿಂದ ಲಾಲಿ ಮಯ್ಯ ಲಾಲಿ............"

ಈ ಪದ್ಯ ದಲ್ಲಿ ದಾಸರ ವೈಶಿಷ್ಟತೆ ಎಂದರೆ ದಶವತಾರದೊಂದಿಗೆ ಶ್ರೀ ಹರಿಯ ಇತರ ಅವತಾರಗಳನ್ನು ಉಲ್ಲೇಖಿಸಿದ್ದಾರೆ.ಅಷ್ಟೇ ಅಲ್ಲದೇ ಶ್ರೀ ಹರಿಯು ಬಿಂಬ ಮೂರ್ತಿ ಸ್ವಗತ ಭೇದ ವಿವರ್ಜಿತನು ಎಂಬುದನ್ನು ಪ್ರತಿಪಾದಿಸಿದ್ದಾರೆ. ಈ ಒಂದು ವಿಶೇಷ ವೈಶಿಷ್ಟ್ಯತೆಯನ್ನು ದಾಸರ ಕೃತಿಯಲ್ಲಿ ಕಾಣಬಹುದಾಗಿದೆ.

.ಶ್ರೀ ವಾದಿರಾಜರು ದಶಾವತಾರವನ್ನು ಉರುಟಣಿ ಹಾಡಿನಲ್ಲಿ ಸೃಷ್ಟಿಸಿದ್ದಾರೆ .ನಾವೆಲ್ಲ ಮಹಿಳೆಯರು ಹಾಡುವ

ಲಕ್ಷುಮಿ ರಮಣನಿಗೆ ಮಾಡಿದಳು ಉರುಟಾಣಿ
ಇಳೆಯೊಳಗತಿಜಾಣಿ ಸುಂದರ ಫಣಿವೇಣಿ॥ಪ॥

ಮಚ್ಛ ಕಚ್ಛಪ ಕಿರನೆ ಕೇಸರಿಯಂದದಿ ಮುಖನೆ।
ಸ್ವಚ್ಛ ಮುಖವ ತೋರ್ರೈ ನಿನಗೆ ಕುಂಕುಮ ಹಚ್ಚುವೆನು.

ಬಲಿಯ ದಾನವ ಬೇಡಿ ಇಳೆಯ ಈರಡಿ ಮಾಡಿ।
ಅಲೆದಅಡಿಗಳ ತೋರ್ರೈ ನಿನಗೆ ಗಂಧವ ಹಚ್ಚುವೆನು.

ದಶರಥನಲ್ಲಿ ಜನಿಸಿ ದಶಮುಖನ ಸಂಹರಿಸಿ।
ಶಶಿಮುಖಿಯ ತಂದವನೆ ಕುಸುಮವ ಮುಡಿಸುವೆನು.

ಹದಿನಾರುಸಾವಿರ ಸುದತೆಯರನಾಳಿದನೆ।
ಪದುಮಕರವ ತೋರ್ರೈ ವೀಳ್ಯವ ಕೊಡುವೆನು.

ವಸನರಹಿತನಾಗಿ ವಸುಧೆಯ ತಿರುಗಿದನೆ
ಬಿಸಜನಾಭನೆ ನಿನಗೆ ವಸನವ ಹೊದ್ದಿಸುವೆನು.

ವರತುರುಗವನ್ನೇರಿ ಕಲಿಯ ಸಂಹರಿಸಿದನೆ।
ಸಿರಿಹಯವದದನನೆ ನಿನಗೆ ನಾನು ಆರತಿ ಎತ್ತುವೆನು.

ಆ.ಗ್ರ. ದಶಾವತಾರ ಪದಗಳು ಸಂಪಾದಕರು :-ರಾಜಾ ಎಸ್. ಗೋಪಾಲಾಚಾರ್ಯ

ಶ್ರೀಪಾದರಾಜ ಯುಗದ ಉತ್ತರ ಭಾಗದಲ್ಲಿ ಮತ್ತು17ನೇ ಶತಮಾನದ ಉತ್ತರಾರ್ಧ ಹಾಗೂ ವಿಜಯದಾಸಯುಗದಲ್ಲಿ ಬರುವ ಬಹುತೇಕ ಎಲ್ಲ ಹರಿದಾಸರೂ ದಶಾವತಾರದ ಕೃತಿಗಳನ್ನು ರಚಿಸಿರುತ್ತಾರೆ. ಶ್ರೀ ಪುರಂದರದಾಸರ ಒಂದು ಕೃತಿ

ಬಾರೆ ಗೊಪಮ್ಮ ನಿನ್ನ ಬಾಲಯ್ಯನಳುತಾನೆ। ಬಾರೆ ಗೋಪಮ್ಮ
ಆರ ತೂಗಿದರೂ ಮಲಗನು ಮುರವೈರಿ।ಬಾರೆ ಗೋಪಮ್ಮ

ನೀರೊಳು ಮುಳುಗಿ ಮೈ ಒರಸೆಂದುಳುತಾನೆ। ಬಾರೆ ಗೋಪಮ್ಮ
ಮೇರುವ ಹೊತ್ತು ಮೈ ಭಾರವೆಂದಳುತಾನೆ। ಬಾರೆ ಗೋಪಮ್ಮ.

ಆರು ನುಡಿಗಳ ಈ ಪದ್ಯದಲ್ಲಿ ಪ್ರತಿ ನುಡಿಯಲ್ಲಿ ಎರಡು ಅವತಾರಗಳ ವರ್ಣನೆ ಇದೆ. ಇವರ ಸಮಕಾಲೀನರಾದ ಶ್ರೀ ಕನಕದಾಸರು ಸಾಕಷ್ಟು ಕೃತಿಗಳಲ್ಲಿ ದಶಾವತಾರವನ್ನು ಸೃಷ್ಟಿಸಿದ್ದಾರೆ.ಇವರು ರಚಿಸಿದ "ಗೋವಿಂದ ಹರಿ ಗೋವಿಂದ ಕೇಶವ ಕೃಷ್ಣ ಜನಾರ್ಧನ।" ಮತ್ತು "ದೇವಿ ನಮ್ಮ ದ್ಯಾವರು ಬಂದಾರೆ ಬನ್ನಿರೇ ನೋಡ ಬನ್ನೀರೆ". ಈ ಕೃತಿಗಳಲ್ಲಿ ದಶಾವತಾರ ರಚಿಸಿದ್ದಾರೆ. ಇವರ ಇನ್ನೂ ಹತ್ತು ಹಲವಾರು ಕೃತಿಗಳಿವೆ.

ಶ್ರೀ ವಿಜಯದಾಸರು ಹಾಗೂ ಶ್ರೀ ಪ್ರಸನ್ನವೆಂಕಟದಾಸರು ಸಮಕಾಲೀನರು.ಇವರೀರ್ವರೂ ಒಬ್ಬರೊನ್ನೊಬ್ಬರು ಭೇಟಿಯಾಗದಿದ್ದರೂ ಇವರೀರ್ವರ ಕೃತಿಗಳಲ್ಲಿ ಹೋಲಿಕೆ ಸಾಮ್ಯತೆ ಇರುವುದು ಕಂಡುಬರುತ್ತದೆ.ಶ್ರೀ ವಿಜಯದಾಸರು ಹಾಗೂ ಶ್ರೀ ಪ್ರಸನ್ನವೆಂಕಟದಾಸರು ಸಮಕಾಲೀನರು ಎಂಬ ಕಾರಣಕ್ಕೆ ಇವರ ಎರಡು ಕೃತಿಗಳನ್ನು ಆಯ್ಕೆ ಮಾಡಿಕೊಂಡು ನನಗೆ ತಿಳಿದಮಟ್ಟಿಗೆ ಹೇಳುವ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ವಿಜಯದಾಸರ ಒಂದು ದೀರ್ಘಕೃತಿಯಾದ
ವಂದಿಸು ವಂದಿಸು ಗುಣವ ಕೊಂಡಾಡಿ ಅರ
ವಿಂದನಾಭನ ಮೂರ್ತಿ ನೋಡಿ ।ಹಾಹಾ।ಆ
ನಂದ ಸಿಂಧುವಿನೊಳು ಪೊಂದು ಒಂದೆ ಭಕ್ತಯಿಂದ
ಇಂದುವಿನಂದದಿಪ್ಪನಾ

ಈ ಕೃತಿಯು 45 ನುಡಿಗಳದ್ದಾಗಿದೆ. ಈ ಕೃತಿಯಲ್ಲಿ ಶ್ರೀ ಹರಿಯ ಅನಂತ ರೂಪಗಳನ್ನು ಕೊಂಡಾಡಿದ್ದಾರೆ ದಾಸರು. ಪ್ರತಿ ನುಡಿಯು 'ವಂದಿಸು'
'ವಂದಿಸು' ಪದದೊಂದಿಗೆ ಕೊನೆಗೊಳ್ಳುತ್ತದೆ.ಈ ಪದ್ಯದ ನಡುವೆ ಅಂದರೆ 9ನೇ ನುಡಿಯಲ್ಲಿ ದಶಾವತಾರವನ್ನು ವರ್ಣಿಸಿರುತ್ತಾರೆ.

ಮೀನ ಕಮಠ ಕಿಟಿ ಮನುಜ ಸಿಂಗ ದಾನ ಪಿಡಿದ ಭೃಗು
ತನುಜ ಸೀತಾ ಪ್ರಾಣೇಶ ಬಲಭದ್ರಾನುಜ
ಅಭಿಮಾನಗೋಡಿ ದುಷ್ಟದನುಜ।ಹಾಹಾ।
ಶ್ರೇಣಿಯ ವ್ರತವ ಕ್ಷೀಣವಗೈಸಿನ್ನು ಜಾಣರ ಕಾಯಿದ ಅನಾಥ ಮಿತ್ರನ್ನ ವಂದಿಸು।

ಈ ಕೃತಿಯು ಶ್ರೀಪ್ರಸನ್ನವೇಂಕಟದಾಸರ "ನಾರಾಯಣ ಪಂಜರ" ಕೃತಿಗೆ ಹೋಲುತ್ತದೆ. "ನಾರಾಯಣ ಪಂಜರ" ಕೃತಿಯು 41 ನುಡಿಗಳದಾಗಿದ್ದು,ದಾಸರು ಈ ಕೃತಿಯಲ್ಲಿ ಪರಮಾತ್ಮನ ಅನಂತ ಗುಣಗಳನ್ನು,ಅನಂತ ರೂಪಗಳನ್ನು, ಭಕ್ತೋದ್ಧಾರ ಕಾರ್ಯಗಳನ್ನು ದಾಸರು ಕೊಂಡಾಡಿದ್ದಾರೆ.ಪ್ರತಿ ನುಡಿಯು "ನಾರಾಯಣಾಯನಮ: ನಾರಾಯಣ"ದಿಂದ ಕೊನೆಯಾಗುತ್ತದೆ. ಈ ಕೃತಿಯಲ್ಲಿ ಆತ್ಮ ನಿವೇದನೆಯ ಪ್ರಾರ್ಥನೆ ಇದೆ. ಒಂದೇ ಒಂದು ಸಾಲಿನಲ್ಲಿ ದಶಾವತಾರವನ್ನು ಸ್ತುತಿಸಿದ್ದಾರೆ.

ಗರುಡ ಗಂಧರ್ವ ಕಿನ್ನರ ಗೀತ ಸಂಪ್ರೀತ।ನಾ
ಗರುವೆ ಲಕುಮಿಯ ಕೂಡಿ ಕ್ರೀಡಾದ್ರಿಯಲ್ಲಿರುವೆ ನಾರಾಯಣಾಯ॥
ಶಂಖ ಚಕ್ರ ಗದಾಬ್ಜ ಶ್ರೀವತ್ಸ ಶೋಭಿತನೆ।ನಾ
ಸಂಖ್ಯೆರಹಿತಾಭರಣ ಭೂಷಣಾವ್ಯಾಕೃತನೆ ನಾರಾಯಣಾಯ
ಮೀನ ಕಚ್ಛಪ ವರಾಹ ನರಹರಿ ವಾಮನ ಭಾರ್ಗವ ।ನಾ
ಮಾನವಪ ಕೃಷ್ಣ ಬುದ್ಧ ಕಲ್ಕಿ ಕಪಿಲಾತ್ರೆಯ ನಾರಾಯಣಾಯನಮ:ನಾರಾಯಣ।

ರಾಗ ತಾಳ, ಪ್ರಾಸದಲ್ಲಿ ವ್ಯತ್ಯಾಸವಾಗದಂತೆ ಎರಡೇ ಸಾಲಿನಲ್ಲಿ ಹತ್ತು ಅವತಾರಗಳಲ್ಲದೇ ಇಡೀ ಮಹಾಭಾರತ ರಾಮಾಯಣ ಭಾಗವತಗಳು ಕಣ್ಮುಂದೆ ನಿಲ್ಲುವಂತೆ ವರ್ಣಿಸಿದ್ದಾರೆ.

ಆ.ಗ್ರ. ಸಮಗ್ರ ದಾಸ ಸಾಹಿತ್ಯ ಸಂ:- 8 ಶ್ರೀ ಪ್ರಸನ್ನವ

ಶುಭ ಕಪೀಶಗೆ ಅಭಯ ವರವಿತ್ತು ಕೈಪಿಡಿದೆ

ಶುಭಕಂಠನಂಜಿಕೆಯ ಹನುಮ ಪೇಳಲು ಕೇಳ್ದೆ.

ಶರಣು ಹೊಕ್ಕಿಹ ವಿಭೀಷಣಗರಸುತನ ಕೊಟ್ಟೆ।
ಶರಧಿ ರಾವಣನಿರಿದು ಸುರರ ಸಂಕಟ ಹರಿದೆ
ಅನುಜನಗ್ನಿಗೆ ಧುಮುಕಲವಧಿ ಮೀರದೇ ಪೊರೆದೆ।
ಅನಿಮಿಷ ನಿರಕತಿ ಆಲ್ಹಾದ ಬೆಳೆಯಿಸಿದೆ
ಉರಿನುಂಗಿ ಗಿರಿ ನೆಗಹಿ ವ್ರಜವ ಪಾಲನ ಮಾಡ್ದೆ।
ಉರಗನೆಳೆತಂದವನ ರಾಣಿಯರ ಸ್ತುತಿಗೊಲಿದೆ.
ನಾರಾಯಣಾಯನಮ:ನಾರಾಯಣ।

ಕೃತು ನಾರಿಯರ ಅನ್ನ ಸವಿದುಂಡು ಸುಖವಿತ್ತೆ
ಕೃತು ಭೊಕ್ತ್ರ ಕೃತುಗಾತ್ರ ಕೃತುಪಾಲ ಕೃತಶೀಲ
ಗೋಪ ಸ್ತ್ರೀಯರ ಕುಚದಿ ನ್ಯಸ್ತ ಚರಣಾಬ್ಜಯುಗ
ಗೋಪಿಜನಜಾರ ನವನೀತದಧಿ ಮಹಚೋರ
ವಂಶಗಾಯನ ಪ್ರೀಯ ವಿಧುಕುಲೋದ್ಭವ ಕೃಷ್ಣ
ವಂಶವರ್ಧಕ ಸುಜನ ವಂಶ ಮರ್ದನ ಕುಜನ
ಅಕ್ರೂರವಂದ್ಯ ಕಂಸಾರಿ ಕುಬ್ಜಾರಮಣ।
ಅಕ್ರಂದಿಸಿದ ತಂದೆತಾಯಿಯರ ಭಯವಳಿದೆ.
ನಾರಾಯಣಾಯನಮ:ನಾರಾಯಣ।

ಅದಿತಿ ಕುಂಡಲದಾತ ಭಗದತ್ತವರದನೆ
ಅಧಿಪತಿಗಳಧೀಪತಿಯೇ ಭೈಷ್ಮಿಸತ್ಯಾರಮಣ
ಶಂಭುವಂದಿತಪಾದ ಸಾಂದಿಪೋದ್ಭವನಿತ್ತೆ
ಶಂಬರಾರಿಯ ಜನಕ ಅಗ್ರ ಪೂಜಾಗ್ರಣಿಯೇ
ಪಾಂಡವರ ಪ್ರಾಣ ದ್ರೌಪದಿ ಮಾನ ರಕ್ಷಕನೆ
ಪೌಂಡ್ರಕಶೃಗಾಲ ಕೌರವ ಭೂಮಿಭಾರಹರ
ಅಭಿಮನ್ಯುವಿನಾತ್ಮಜನ ಬಸಿರೊಳಗೆ ಸಲಹಿದೆಯೋ
ಅಭಯದಲಿ ಪಾಂಡವರ ಸಂತತಿಯ ಬೆಳೆಸಿದೆಯೋ
ನಾರಾಯಣಾಯನಮ:ನಾರಾಯಣ।

ಷತ್ಕೋಟಿಯುತ ಚರಣ ಶ್ರೀ ಭೂರಮಣ
ಷಟ್ಕಮಲ ನಿಲಯ ಚಿನ್ಮಯ ಚಿದ್ಗುಣಾರ್ಣವನೆ
ಭಕ್ತಾಭಿಮಾನಿ ಭೂದೂರ ಭಕ್ತರ ಪ್ರಭುವೆ
ಭಕ್ತವತ್ಸಲ ಕೃಪಾಂಬುದಿಪರಾತ್ಪರ ಕೃಷ್ಣ

ವಸುಧಿ ವೈಕುಂಠ ಮಂದಿರವಾಸ ಶ್ರೀವಾಸ।

ವಸುಪ್ರೀತ ವಸುಕರ್ತವಸುದಾತ ವಸುಪೂರ್ಣ
ಆದಿನಾಥಾಪ್ರಮೇಯಾದಿಪುರುಷೋತ್ತಮನೆ
ಆದಿ ಮಧ್ಯಾಂತ ಶೂನ್ಯಾದಿ ದೇವೋತ್ತಮನೆ
ನಾರಾಯಣಾಯನಮ:ನಾರಾಯಣ।

ಈಕೃತಿಯಲ್ಲಿ ಕೊನೆಯ ಚರಣದಲ್ಲಿ ದಶಾವತಾರದ ಚತುರಾವತಾರಗಳಲ್ಲಿ ಆತ್ಮನಿವೇದನೆಯನ್ನು ಹೀಗೆ ಪ್ರಾಸಬದ್ಧವಾಗಿ ಮಾಡುತ್ತಾರೆ.

ವಾರಿಯಲಿ ಭೂಮಿಯಲಿ ಅಡವಿಯಲ್ಯೂ ಕಾಯೋ
ವಾರಾಹ ವಾಮನ ನರಸಿಂಹ ಕೇಶವ
ಸತ್ಕಲೋದ್ಭವನಾಗಿ ಸನ್ಮಾರ್ಗರಿಯಲಿಲ್ಲ
ಸತ್ಕರ್ಮಗಳಿಗೆ ಬಹಿಷ್ಕ್ರತನಾಗಿ ಬಾಳುತಿಹೆ
ಒಂದು ಜಾವದತಪ್ಪನೆಂದೆಂದಿಗುಣಲಾರೆ
ವಂದಿಸುವೆ ಸಾಷ್ಟಾಂಗ ತ್ರಾಹಿತ್ರಾಹಿ ಪಾಹಿ
ಮಧ್ವೇಶ ಮಧ್ವಪ್ರಿಯ ಮಧ್ವಮತ ಪ್ರತಿಪಾಲ
ಮಧ್ವಗುರುಸ್ತುತ್ಯ ಮಧ್ವಾರ್ಚಿತಪದಾಬ್ಜ ಹರಿ
ಏನರಿಯದವ ನಾನು ನೀನೆ ಪರಗತಿ ಎನಗೆ
ಪ್ರಾಣ ನಿನಗರ್ಪಿಸಿದೆ ಪ್ರಸನ್ನವೆಂಕಟ ಕೃಷ್ಣ
ನಾರಾಯಣಾಯನಮ:ನಾರಾಯಣ।

ದಿವ್ಯವಾದಂತಹ ರಚನೆಗಳನ್ನು ಮಾಡಿ, ಏನರಿಯದವ ನಾನು ನೀನೆ ನನಗೆ ಗತಿಯೆಂದು ಭಗವಂತನ ಮೊರೆಹೋಗುತ್ತಾರೆ.ಅವರ ಪ್ರತಿ ಹಾಡಿನಲ್ಲಿಯೂ ಈ ನಿವೇದನೆ ತುಡಿವಿದೆ.ಇನ್ನೂ ನಾನು ಭಗವಂತನ ಸೇವೆಯನ್ನು ಮಾಡಬೇಕಿತ್ತು ಎಂಬ ಭಾವ ವ್ಯಕ್ತವಾಗುತ್ತದೆ.ಭಗವಂತನ ಸೇವೆಯಲ್ಲಿ ಅವರ ಅತೃಪ್ತ ಭಾವವಿದೆ.

ಶ್ರೀ ವಿಜಯದಾಸರ ಇನ್ನೊಂದು ಕೃತಿಯಾದ
ಆರಯ್ಯ ಕಣ್ಣಮುಂದೆ ಬಂದು ನಿಂತಿಯೇ
ಸಾರು ನೀನು ಎನಗೆ ಸುಮ್ಮನ್ಯಾತಕೆ ಯಿದ್ದೀ

ನೀರೊಳು ಮುಣುಗೆ ವೇದವ ತಂದಾತನೋ
ಭಾರವನು ಪೊತ್ತ ಸುರರ ಕಾಯಿದಾತನೊ
ಧಾರಣಿನೆಗಹಿ ಉದ್ಧಾರ ಮಾಡಿದಾತನೋ
ಕ್ರೂರ ದೈತ್ಯನ ಕೊಂದ ಕುಜನ ಗಿರಿಗೆವ್ರಜನೋ

ಆ.ಗ್ರ. ಸಮಗ್ರ ದಾಸ ಸಾಹಿತ್ಯ ಸಂ:- ೮ ಶ್ರೀ ಪ್ರಸನ್ನವೆಂಕಟದಾಸರು ಮತ್ತು ಸಮಗ್ರ ದಾಸ ಸಾಹಿತ್ಯ ಸಂ:- ೯ ಭಾ.-1 ಶ್ರೀ ವಿಜಯದಾಸರು

ಗಗನಕೆ ಬೆಳೆದು ಸುರ ನದಿಯ ಪಡೆದಾತನೋ
ಹಗೆಗಳ ಕೊಂದು ಹರುಷಿತನಾದನೋ
ಜಗವಲಿಯ ಶಿಲಿಯ ನಾರಿಯ ಮಾಡಿದಾತನೋ
ಮಗನಮಗನ ತಂದ ಮಹಿಮನೋ

ಹರಗೆ ಸಾಯಕವಾಗಿ ಪುರ ಉರುಹಿದಾತನೋ
ದುರುಳನ ಕೊಂದ ದುರ್ಲಭದೇವನೋ
ಕರಿರಾಜವರದ ಶ್ರೀ ವಿಜಯವಿಠ್ಠಲರೇಯ
ಶರಣರಿಗೊಲಿದು ಬಂದ ಸರ್ವೋತ್ತಮನೋ।

ಶ್ರೀ ವಿಜಯದಾಸರ ಈ ಕೃತಿಯಲ್ಲಿ ಆಡು ಬಾಷೆಯ ಸೊಗಡು ಇದೆ.ಮೊದಲ ಹಾಗೂ ಎರಡನೆ ನುಡಿಗಳಲ್ಲಿ ನಾಲ್ಕು ನಾಲ್ಕು ಅವತಾರಗಳು ಕೊನೆಯ ನುಡಿಯಲ್ಲಿ ಎರಡು ಅವತಾರಗಳನ್ನು ವರ್ಣಿಸಿರುತ್ತಾರೆ.

ಪ್ರಸನ್ನವೆಂಕಟದಾಸರ ಒಂದು ಕೃತಿಯನ್ನು ಹೋಲಿಸಿ ನೋಡಿದಾಗ

ಬಲ್ಲವರು ಮೊರೆ ಹೋಗುವರೆ ನೀನಾವ
ಬಲ್ಲಿದನೆಮದೆನ್ನನುಪೇಕ್ಷಿಪೆ ರಂಗ

ಸಲ್ಲದವನು ಸಾಲಗೂಳಿ ನೀ ಎಂದೆನ್ನ
ಕ್ಷುಲ್ಲನ ಮಾಡಿ ನೀಕರಿಸದಿರೊ
ಒಳ್ಳೆ ಸತ್ಯವ್ರತರ ಋಣ ನುಂಗಿ ಸೆಎಸಿಕ್ಕಿ
ಕಲ್ಹೊತ್ತು ಪುಲ್ಗಚ್ಚಿ ಹಲ್ದೆರೆದೆ ನೀನು

ಬೇಡಿ ತಿರಿದು ಉಂಬ ಛೀ ಸಾರೆಂದೀ
ಡಾಡುವುದುಚಿತೆ ನೀ ನೃಪನೊಂಚಿಸಿ
ಬೇಡಿ ಮನೆಯ ಕೊಂಡೆ ನೀರಿನರಸನಲ್ಲಿ
ರೂಢಿಯ ಗೂಡ ಬಿಟ್ಟೋಡಿದೆ ತುಡುಗ

ನಾ ದೋಷಪೂರ್ಣನೆನುತ ಮನ ಬಲ್ಲದು
ನೀ ದೋಷದೂರನು ಶ್ರುತಿ ಬಲ್ಲವು
ಭೂ ದೋಷಹರ ಪ್ರಸನ್ವೆಂಕಟೇಶ ತಿಳಿಯದೆ
ನಾ ದಾಸನಾದೆ ನಾಮಸ್ವಾದಕ್ಕುಚ್ಚಾದೆ

ಆ.ಗ್ರ. ಸಮಗ್ರ ದಾಸ ಸಾಹಿತ್ಯ ಸಂ:- ೮ ಶ್ರೀ ಪ್ರಸನ್ನವೆಂಕಟದಾಸರು

ಈ ಎರಡೂ ಕೃತಿಗಳಲ್ಲಿ ದಾಸ್ಯತ್ವವಿದೆ. ಇಲ್ಲಿ ಪ್ರಸನ್ನವೆಂಕಟದಾಸರ ವಿಶೇಷತೆ ಏನು ಅಂದ್ರೆ ಒಂದೊಂದೇ ಶಬ್ದದಲ್ಲಿ ಒಂದೊಂದು ಅವತಾರವನ್ನು ವರ್ಣಿಸಿರುತ್ತಾರೆ. " ಕಲ್ಹೊತ್ತು ಪುಲ್ಗಚ್ಚಿ ಹಲ್ದೆರೆದೆ ನೀನು" ಈ ಸಾಲಿನ ಒಂದೊಂದು ಶಬ್ದವೂ ಒಂದೊಂದು ಅವತಾರದ ವರ್ಣನೆಯಾಗಿದೆ. "ಕಲ್ಹೊತ್ತು" ಕೂರ್ಮಾವತಾರಿಯಾದ ಭಗವಂತ ಮಂದರ ಪರ್ವತವನ್ನು ಹೊತ್ತಿದ್ದಾನೆ.ಪುಲ್ಗಚ್ಚಿ" ಎಂದರೆ ವರಾಹ ಅವತಾರಿ ಭಗವಂತ ಶ್ರೀ ಭೂದೇವಿಯನ್ನು ರಕ್ಷಿಸಿದ ವರ್ಣನೆ ಇದೆ. ಇನ್ನೂ ವಿಶೇಷವೆಂದರೆ "ಹಲ್ದೆರೆದೆ "ಇದು ಶ್ರೀ ನರಸಿಂಹಾವತಾರಿ ಭಗವಂತನ ವರ್ಣನೆಯಾಗಿದೆ: ಇಂತಹ ಶಬ್ದಗಳ ಪ್ರಯೋಗ ಕೀರ್ತನೆಗಳ ಛಂದಸ್ಸನ್ನು ಇಮ್ಮಡಿಗೊಳಿಸುತ್ತದೆ. ಎರಡನೆ ನುಡಿಯಲ್ಲಿ "ನೃಪನೊಂಚಿಸಿ" ಬಲಿಚಕ್ರವರ್ತಿಯ ಇಕ್ಕಟ್ಟಿಗೆ ಸಿಲುಕಿಸಿ "ಬೇಡಿ ಮನೆಯನ್ನು ಕೊಂಡೆ" ಎಂಬುದು ವಾಮನಾವತಾರಿ ಹರಿಯ ರೂಪದ ವರ್ಣನೆಯಾಗಿದೆ.ಕೀರ್ತನೆಗಳಲ್ಲಿಯ ಪದಪ್ರಯೋಗವೇನಿದೆ ಅದು ಬಲು ವೈಶಿಷ್ಟತೆಯಿಂದ ಕೂಡಿದೆ.

ಒಂದೊಂದು ಕೀರ್ತನೆಗಳು ಭಿನ್ನ ಭಿನ್ನವಾಗಿವೆ. ಈ ಕೀರ್ತನೆಯು ಐದು ಅವತಾರಗಳನ್ನು ವರ್ಣಿಸುತ್ತದೆ.ಬೇರೆ ಅವರ ಕೀರ್ತನೆಗಳಲ್ಲಿ ಮೂರು ಅವತಾರಗಳು ಎರಡು ಅವತಾರಗಳು ಒಂದೇ ನುಡಿಯಲ್ಲಿ ಹತ್ತು ಅವತಾರಗಳು ಹೀಗೆ ವಿಭಿನ್ನ ಶೈಲಿಯನ್ನು ಅನುಸರಿಸಿರುತ್ತಾರೆ. ಅವರ "ಸತ್ಯಭಾಮಾ ವಿಲಾಸ" ಶ್ಲೋಕ ಹೀಗಿದೆ.

ಹಾಹಾ ಕೈತವ ಮೀನ ಜೃಂಭ ಕಮಠ ಹಾ ಹೈಮದೃಷ್ಟಾತಕ
ಹಾಹಾ ನಿಷ್ಕರುಣಾಂಗ ಶಿಕ್ಷಕ ಹರ ಹಾಹಾ ಬಲಿರ್ವಂಚಕ
ಹಾಹಾ ಮಗಾರ್ದ ಜಾರವ್ರತ ಹಾಹಾ ಕಲಿ ಮಾನರಕ
ಹಾಹಾ ಮದ್ಗಹ ದೂರಕ ಪರಸುಖ ಆಶಾಬ್ಧಿ ಸಂತೋಷಕ
"ನಾರದ ಕೊರವಂಜಿ " ಯಲ್ಲಿ ಬರುವ ಒಂದು ಪದ್ಯ
ಜಯ ಜಯ ಜಯ ಜಯ ಜಯ ಜಯ
ಶ್ರೀ ರಮಾರಮಣ ಜಯ ಶ್ರೀಕರ ಗುಣಾಬ್ಧಿ ಜಯ
ಶ್ರೀ ರುಕ್ಮೀಣೀಶ ಜಯ ಶ್ರೀನಿವಾಸ ಜಯ ಶ್ರೀನಿವಾಸ ಜಯ
ನೀರಚರ ಕಮಠ ಕಿಟಿ ನೃಹರಿ ವಟು ಭೃಗ ರಘು
ವೀರ ಯದುಪತೆ ಬುದ್ಧ ಕಲ್ಕಿ ಸ್ವರೂಪಾ ಜಯ ಜಯ

ಆ. ಗ್ರ. ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು ಸಂಪುಟ 2

ಎರಡೇ ಸಾಲಿನಲ್ಲಿ ಹತ್ತು ಅವತಾರಗಳನ್ನು ವರ್ಣಿಸಿರುವುದು ಅಲ್ಲದೇ 'ಕಿಟಿ' ಶಬ್ದದ ವಿಶೇಷ ಕಾಣುತ್ತೇವೆ.ಕಿಟಿ ಎಂದರೆ 'ವರಾಹ' ಅವತಾರದ ವರ್ಣನೆಯ ವಿಶೇಷತೆ.

ಶ್ರೀ ವಿಜಯದಾಸರು ಹಾಗೂ ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳಲ್ಲಿ ಸಮಕಾಲೀನ ಸಾಮ್ಯತೆ,ಆಡುಭಾಷೆಯಲ್ಲಿಯ ರಚನೆ,ಆತ್ಮ ನಿವೇದನಾ ವೈಶಿಷ್ಟತೆಗಳನ್ನು ಕಾಣುತ್ತೇವೆ. ಒಂದೇ ಸಾಲಿನಲ್ಲಿ ಒಂದೊಂದು ಶಬ್ದದಲ್ಲಿ ಒಂದೊಂದು ಅವತಾರಗಳನ್ನು ಸೃಷ್ಟಿಸಿದಂತೆ ಶ್ರೀಪ್ರಸನ್ನವೆಂಕಟದಾಸರೂ ಸಹ ಒಂದೇ ಸಾಲಿನಲ್ಲಿ ಒಂದೊಂದು ಶಬ್ದದಲ್ಲಿ ಒಂದೊಂದು ಅವತಾರಗಳನ್ನು ಸೃಷ್ಟಿಸಿರುತ್ತಾರೆ. .ವಿಶೇಷವಾಗಿ ಶ್ರೀಕೃಷ್ಣಾವತಾರದ ಇವರಕೀರ್ತನೆಗಳುಅದ್ಭುತವಾಗಿವೆ. ಬಾಲಭಾಷೆ,ಬಾಲಲೀಲೆ ಕೊಳಲೂದುವ ಪರಿ , ಬಾ ಎಂದು ಕರೆಯುವ ಪದ್ಯ, ಯಶೋದೆ-ಕೃಷ್ಣರ ಸಂವಾದ, ಶ್ರೀಕೃಷ್ಣನನ್ನು 'ಬಾರಮ್ಮ' ಎಂದು ಸ್ತ್ರೀರೂಪದಿಂದ ಸಂಬೋಧಿಸುವ ರೀತಿ ಹೀಗೆ ಹತ್ತು ಹಲವಾರು ರೂಪಗಳಿಂದ ಹಾಡಿ ಹೊಗಳಿದ್ದಾರೆ.ಇವರು ರಚಿಸಿದ ಶ್ರೀರಾಮಾವತಾರ ಹಲಿಯ ಪದ್ಯಗಳು ವೈಶಿಷ್ಟತೆಯನ್ನು ಮೆರೆದಿವೆ.

## <u>ಉಪಸಂಹಾರ</u>:-

ಶ್ರೀಪಾದರಾಯರ ಯುಗದ ನಂತರದಲ್ಲಿ ಬಂದಂತಹ ಪುರಂದರದಾಸರಿಂದ ಶ್ರೀ ವಿಜಯದಾಸರವರೆಗಿನ ಸಾಹಿತ್ಯವನ್ನು ಅವಲೋಕಿಸಿದಾಗ,ಶ್ರೀಪ್ರಸನ್ನವೆಂಕಟದಾಸರು ಶ್ರೀವಾದಿರಾಜರ ಕೃತಿರಚನಾ ಶೈಲಿಯನ್ನು ಬಹಳ ಕಾಲದ ನಂತರ ಮತ್ತೆ ಮುಂದುವರಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಯತಿಗಳೊಂದಿಗೆ ದಾಸರ ಪೂರ್ವಾಪರ ಸಂಬಂಧವಿರಬಹುದು ಎನಿಸುತ್ತದೆ. ಅಪರೋಕ್ಷ ಜ್ಞಾನಿಗಳ ಆಶೀರ್ವಾದದಿಂದಲೇ ಶ್ರೀಪ್ರಸನ್ನವೆಂಕಟದಾಸರು ಅಪರೋಕ್ಷ ಜ್ಞಾನಿಗಳೆನಿಸಿ ನಮಗೆಲ್ಲ ಹರಿದಾಸ ಸಾಹಿತ್ಯವೆಂಬ ಅಮೃತದ ಜೊತೆಗೆ ಅನೇಕ ನಮ್ಮ ಇಷ್ಟಾರ್ಥಗಳನ್ನು ಸಲ್ಲಿಸಲು ಅಭಯ ಹಸ್ತರಾಗಿ ನಮ್ಮ ಬಾಗಲಕೋಟೆಯಲ್ಲಿ ನೆಲೆಸಿದ್ದಾರೆ. ನನ್ನ ಇಷ್ಟಾರ್ಥ ಈಡೇರಿಸುತ್ತಿದ್ದಾರೆ. ಅವರ ಆಶೀವಾದದಿಂದಲೇ ನನ್ನ ಜ್ಞಾನಕ್ಕೆ ನಿಲುಕಿದ ಕೆಲವು ಕೃತಿಗಳ ಯಥಾಮತಿ ಅಧ್ಯಯನ ಮಾಡಿ ಸೇವೆಯನ್ನು ಸಮರ್ಪಿಸಿದ್ದೇನೆ. ಸೇವೆ ಕೊಡುವವರೂ ಅವರೇ,ಸೇವೆಯನ್ನು ಮಾಡಿಸಿಕೊಳ್ಳುವವರೂ ಅವರೇ ನಾನು ಸೇವಾಕಾಂಕ್ಷಿಯಾಗಿಯೇ ದಾಸರ ಕೀರ್ತನೆಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಬಯಕೆಯಿಂದ ಈ ಸಂಶೋಧನಾ ಕಾರ್ಯಕ್ಕೆ ಮುಂದಾಗಿದ್ದೇನೆ.

**ಮುಂದಿನ ಅಧ್ಯಯನಕ್ಕೆ ಮಾರ್ಗ ಸೂಚಿ:-** ಎ.ಬಿ ಪಾಟಿಲರವರ ಒಂದು ಗ್ರಂಥ ಮತ್ತು ಕರ್ನಾಟಕ ಸರ್ಕಾರ ಪ್ರಕಟಿಸಿದ ಸಮಗ್ರ ದಾಸ ಸಾಹಿತ್ಯ ಹೊರತು ಪಡಿಸಿದರೆ ಶ್ರೀ ಪ್ರಸನ್ನವೆಂಕಟದಾಸರ ಜೀವನ ಮತ್ತು ಕೃತಿಗಳನ್ನು ಅಧ್ಯಯನ ಮಾಡಿದಂಥ ಕೃತಿಗಳು ಬಹಳ ವಿರಳವೆಂದೇ ಹೇಳಬಹುದು.ದಾಸರ ವಂಶಸ್ಥರಾದ ಶ್ರೀ ಧ್ರುವಾಚಾರ್ಯ ಕಾಖಂಡಕಿಯವರು, , ಶ್ರೀಮತಿ ರೇಖಾ ಕಾಖಂಡಕಿಯವರು ಅವರ ಜೀವನ ಕುರಿತು ಕಾದಂಬರಿಗಳನ್ನು ಹೊರತಂದಿದ್ದಾರೆ. ಶ್ರೀ ಸುಭಾಸ ಕಾಖಂಡಕಿಯವರು ಟ್ರಸ್ಟ ಸ್ಥಾಪನೆ ಮಾಡಿ ಹೊಸ ಹೊಸ ಕೃತಿಗಳ ಸಂಶೋಧನಾ ಕಾರ್ಯಕ್ಕೆ ಮುಂದಾಗಿದ್ದಾರೆ. ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳಲ್ಲಿ ಜಾನಪದ ಸೊಗಡು ಇದೆ.ಸಾಮಾಜಿಕ ಕಳಕಳಿ ಇದೆ.ಸಾಂಪ್ರದಾಯಿಕ ಆಚರಣೆಗಳ ಉಲ್ಲೆಗಳಿವೆ. ವಿಶಿಷ್ಟ ಶೈಲಿಯ ಪದಪ್ರಯೋಗಗಳ ಸಂಯೋಗವಿದೆ.ಸಂಸ್ಕ್ರತ ಕನ್ನಡ ಭಾಷೆಗಳ ವಿಶಿಷ್ಟ ಮಿಶ್ರಣಗಳ ಕೃತಿಗಳ ರಚನೆ ಇದೆ.ಭಾಷೆಯ ವೈಶಿಷ್ಟತೆ ಅಧ್ಯಯನದ ಅವಶ್ಯಕತೆ ಇದೆ. ಕೆಲವೊಂದು ಕ್ಲಿಷ್ಟಕರ ಪದಗಳು ಸಾಮಾನ್ಯ ಜನರಿಗೆ ಅರ್ಥವೇ ಆಗುವುದಿಲ್ಲ. ಅವುಗಳನ್ನು ಅರ್ಥೈಯಿಸುವ ಅಗತ್ಯತೆ ಇದೆ.ಶ್ರೀ ಪ್ರಸನ್ನವೆಂಕಟದಾಸರು ಬಾದಾಮಿಯಲ್ಲಿಯೇ ತಮ್ಮ ಕೊನೆಯ ದಿನಗಳನ್ನು ಕಳೆದಿರುವ ಉಲ್ಲೇಖವಿದೆ.ದಾಸರು ಶ್ರೀ ಬನಶಂಕರಿಯ ಕುರಿತಾದ ಪದ್ಯಗಳನ್ನು ರಚಿಸಿರಲೂಬಹುದು. ಅವುಗಳ ಸಂಶೋಧನೆಯಾಗಬೇಕಾಗಿದೆ.